ಅಪರಂಜಿ

ಸೆಪ್ಟೆಂಬರ್ 98

ತಿಳಿನಗೆಯ ಕಾರಂಜಿ



ಪ್ರಕಾಶ್

ಭೂಷಿ

ವೈ. ನಾ. ಶರ್ಮ

ಕೆ. ಚಂದ್ರಮೌಳಿ

ಎಂ. ಎಸ್. ಕೆ.

ಆರತಿ

ಅ. ರಾ. ಸೇ.

ಡಾ। ಬಸವರಾಜ ಸಾದರ

ಬೇಲೂರು ರಾಮಮೂರ್ತಿ

ಯು. ಎಸ್. ರಾವ್

ಬಿಡಿ ಪ್ರತಿ: ರೂ. 3.50



ಗೌರವ ಸಲಹೆಗಾರರು:
ಶ್ರೀ ಅ. ರಾ. ಸೇ.
ಶ್ರೀ ಶೇಷಗಿರಿ

ಸಂಪಾದಕ:
ಶಿವಕುಮಾರ್

ಚಂದಾ ವಿವರ:

ಬಿಡಿ ಪ್ರತಿ: ರೂ. 3.50

ವಾರ್ಷಿಕ ಚಂದಾ: ರೂ. 35

ಆಜೀವ ಚಂದಾ : ರೂ. 350

ವಿಳಾಸ : ಅಪರಂಜಿ ಕಾರ್ಯಾಲಯ, 36, 6ನೇ ಮುಖ್ಯ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 003 (ಕೆಲಸದ ವೇಳೆ: ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ)

ಈ ಸಂಚಿಕೆಯಲ್ಲಿ

ಸಂಪುಟ 16 | ಸೆಪ್ಟೆಂಬರ್ '98 | ಸಂಚಿಕೆ- 12

ಮುದ್ರಣ: ಇಂಪ್ರೆಶನ್ಸ್, ಬೆಂಗಳೂರು - 3   ಅಕ್ಷರ ಜೋಡಣೆ: ಒಮೇಗಾ ಲೇಸರ್ ಟೆಕ್, ಬೆಂಗಳೂರು 27

ಅಪರಂಜಿ

(ತಿಳಿನಗೆಯ ಕಾರಂಜಿ)

> ಬ್ರಹ್ಮವು ಶಾಸ್ತ್ರಯೋನಿ. ಏಕೆಂದರೆ ಸಮನ್ವಯವಿದೆ.
>
> - ಬ್ರಹ್ಮಸೂತ್ರಗಳು

ಬ್ರಹ್ಮವೂ ಆತ್ಮವೂ ಒಂದೇ ಎಂದು ಉಪನಿಷತ್ ಶಾಸ್ತ್ರವು ತಿಳಿಸಿಕೊಡುತ್ತದೆ. ಏಕೆಂದರೆ ಎಲ್ಲ ಉಪನಿಷತ್ತುಗಳೂ ಇದನ್ನೇ ಹೇಳುತ್ತವೆ.

ಹಾಗೆಯೇ ನಮ್ಮ ಸ್ವಾತಂತ್ರ್ಯವು ನಮ್ಮದೇ. ಅದು ಇನ್ನೊಬ್ಬರದಲ್ಲ ಎಂದೂ ನಾವು ತಿಳಿಯಬೇಕು.

ಅಣುಶಸ್ತ್ರಸಾಧನದ ಸ್ಫೋಟವನ್ನು ಕ್ಲಿಂಟನ್ನನೋ, ಬ್ಲೇರನೋ, ಮತ್ತೊಬ್ಬ ದೊಣೆ ನಾಯಕನೋ ಒಪ್ಪಬೇಕೆಂದೇನೂ ಇಲ್ಲ. ಅದು ನಮ್ಮ ಅಗತ್ಯ. ಭಾರತವು ಸ್ವತಂತ್ರವಾಗುವುದಕ್ಕೆ ಅವರೇನೂ ಹೋರಾಡಲಿಲ್ಲ. ನಾವೇ ಹೋರಾಡಿದು. ಇನ್ನು ಚೀಣಾದ ವಿಷಯ. ಹಿಂದಿ-ಚೀಣಿ ಭಾಯಿಭಾಯಿ ಎಂದದ್ದರ ಫಲವನ್ನು ಈಗಾಗಲೇ ಕಂಡಿದ್ದೇವೆ. ನಮ್ಮ ಸ್ಫೋಟ ಶಸ್ತ್ರಾಸ್ತ್ರ ಸ್ಪರ್ಧೆಯನ್ನೇನೂ ಉಂಟುಮಾಡಲಿಲ್ಲ. ನಮಗೆ ಹೊರೆಯಾದ ನೆರೆಯವರು ಈಗಾಗಲೇ ಸ್ಫೋಟಿಸಿದ್ದರು. ನಾವು ಸ್ಫೋಟಿಸಿದ್ದನ್ನು ಕಂಡು ಸಹಿಸದೆ ಚಿತಾವಣೆ ಮಾಡುತ್ತಿದ್ದಾರೆ.

ಇನ್ನು ನಮ್ಮಲ್ಲೂ ಕೆಲವರು ಇದನ್ನು ವಿರೋಧಿಸುತ್ತಿರುವುದು ದುರದೃಷ್ಟಕರ. ರಾಷ್ಟ್ರದ ರಕ್ಷಣೆಯ ಅಗತ್ಯವೇ ಅವರಿಗೆ ತಿಳಿದಿದೆಯೋ ಇಲ್ಲವೋ. ಇದು ಅವಿವೇಕವೆಂದು ಇಂದಿನ ಕೇಂದ್ರ ಸರ್ಕಾರವನ್ನು ಹಳಿಯುತ್ತಿರುವವರ ವಿವೇಕ ಏನು ಎಂದು ಯಾರಿಗೆ ತಿಳಿದಿಲ್ಲ? ಸಂವಿಧಾನವನ್ನು ಅಧಿಕಾರಗಳಿಸುವ Some ವಿಧಾನ ಎಂದು ಭಾವಿಸುವವರ ಅಬ್ಬರಕ್ಕೆ ಏನು ಹೇಳಬೇಕು? ಸಂವಿಧಾನದಲ್ಲಿರುವ ಸಮಾನತೆಗೆ ಈಗ ಬಂದಿರುವ ಅರ್ಥವನ್ನು ಕೊಟ್ಟವರು ಯಾರು. ರಕ್ಷಣಾತ್ಮಕವಾದ ವಿಶ್ಲೇಷಣೆ ಮಾಡಿರುವ 'ಭೂಷಿ'ಗೆ ಭಲೆ ಚಾಂಗು ಎನ್ನುತ್ತಾ, ಅಪರಂಜಿ ಭವಿಷ್ಯವನ್ನು ಎದುರು ನೋಡುತ್ತಿದ್ದಾಳೆ.



○ ಪ್ರಕಾಶ್

ತರಗತಿಗಳಿಗೆ ಬಹಿಷ್ಕಾರ; ಕಾಲೇಜು ಅಧ್ಯಾಪಕರ ನಿರ್ಧಾರ

- ಸುದ್ದಿ

ಇದು ವಿದ್ಯಾರ್ಥಿಗಳಿಗೆ ತಿಳಿಯುವುದು ಯಾವಾಗಲೋ??

★★★

ದಂತ ವೈದ್ಯ; ಅಧಿಕ ಶುಲ್ಕಕ್ಕೆ ಹೈಕೋರ್ಟು ತಡೆ

- ಪತ್ರಿಕೆ

ಪ್ರಥಮ ಪ್ರಯತ್ನೇ ದಂತ ಭಗ್ನಂ!!

★★★

ಶ್ರೀ ಕೃಷ್ಣವರದಿಗೆ ಮಹಾರಾಷ್ಟ್ರ ಸರ್ಕಾರ ತಿರಸ್ಕಾರ

- ಸುದ್ದಿ

ರಾಮ, ರಾಮ!!

★★★

ಶಿಕ್ಷಕರಿಗೆ ಪಾರದರ್ಶಕ ವ್ಯಕ್ತಿತ್ವವಿರಲಿ

- ಹೇಳಿಕೆ

ಆಗಲೆ ಅವರೆಲ್ಲ ತೆಳುವಾಗಿದ್ದಾರೆ!!

★★★

ಹಸಿರು ವಲಯದಲ್ಲಿ ಕಟ್ಟಡ; ಪರಿಶೀಲನಗೆ ಕೋರ್ಟ್ ಕ್ರಮ

ಜಡ್ಜರ ಕಣ್ಣು ಕೆಂಪಾಗಿರಬೇಕು!!

★★★

ಬಂಗಾರಪ್ಪ ಮತ್ತೆ ಕಾಂಗ್ರೆಸ್ಸಿಗೆ

- ಸುದ್ದಿ

ಅದೇ ಉಂಪೇನು......!!

★★★

ಗಂಗಾ ಕಾವೇರಿ ಜೋಡಣೆ; ಸಚಿವರ ಆಶಯ

- ಪತ್ರಿಕೆ

ಆಗ ಜಯಲಲಿತ ಅವರ ವ್ಯಾಪ್ತಿ ಹೆಚ್ಚುತ್ತದೆ!!

★★★

ಹಣದುಬ್ಬರದ ದಾಖಲೆ

- ಆರ್ಥಿಕ ಸುದ್ದಿ

ಇದರಲ್ಲಾದರೂ ದಾಖಲೆ ಇದೆಯಲ್ಲ!!

★★★

ಭಯೋತ್ಪಾದನೆ ಒಳ್ಳೆಯದಲ್ಲ ಎಂದು ನವಾಜ್ ಷರೀಫ್ ಹೇಳಿದರು

- ಶ್ರೀ ವಾಜಪೇಯಿ

ಈ ಹೇಳಿಕೆಯಿಂದಲೇ ನಮಗೆ ಭಯೋತ್ಪಾದನೆ??

★★★

ರಾಜಕೀಯವೆಂದರೆ ಕೇವಲ ಚುನಾವಣೆಗೆ ಟಿಕೆಟ್ ಪಡೆಯುವುದಲ್ಲ

- ಸೋನಿಯಾ

ಅವರಿಗೆ ಇದು ಹೊಳೆದದ್ದು ಆಶ್ಚರ್ಯಕರ!!

★★★



ನಿನ್ನೆ ಇದೇ ಸೀರೆ ಆ ಮಾಡೆಲ್ ಮೇಲೆ ಎಷ್ಟು ಚೆನ್ನಾಗಿ ಕಾಣಿಸ್ತಿತ್ತೂರೀ..

ದಿ ಒನ್ ದಟ್ ಗಾಟ್ ಅವೇ
(The one that got away)

- ಭೂಪಿ

ಅಂತೂ ಇಂತೂ ನನ್ನ ಅನುಭವ ಮಾಲಿಕೆಗೆ ಮಂಗಳ ಹಾಡುವ ಸಮಯ ಬಂದೇ ಬಿಟ್ಟಿತು. ನಾನು ಮೊದಲೇ ತಿಳಿಸಿರುವಂತೆ ನನ್ನ ಸಿಕಂದರಾಬಾದ್ ಜೀವನದಲ್ಲಿನ ಒಂದೆರಡು ಕುತೂಹಲಕಾರಿ ಘಟನೆಗಳನ್ನು ಈ ಮಂಗಳಕ್ಕೆ ಆರಿಸಿಕೊಂಡಿದ್ದೇನೆ.

ನನ್ನ ಸೈನಿಕ ಜೀವನದಲ್ಲಿನ ಈ ಘಟ್ಟ ನನಗೆ ನನ್ನ ಅತ್ಯಂತ ತೃಪ್ತಿದಾಯಕವೂ, ವೈವಿಧ್ಯಮಯವೂ ಆಗಿತ್ತೆಂದರೆ ಅತಿಶಯೋಕ್ತಿಯಾಗಲಾರದು. ನಾಲಕ್ಕು ವರ್ಷಕ್ಕೂ ಹೆಚ್ಚಿನ ಕಾಲ ಇಲ್ಲಿಯ ನಮ್ಮ ಉನ್ನತ ಶಿಕ್ಷಣ ಸಂಸ್ಥೆಯಾದ Military College of Electronics and Mechanical Engineering (MCEME)ನ ಮುಖ್ಯಸ್ಥನಾಗಿ (ಕಮಾಂಡೆಂಟ್) ಕೆಲಸ ಮಾಡುವ ಸುಯೋಗ ನನಗೆ ಲಭಿಸಿತು. ನಾನು ಬ್ರಿಗೇಡಿಯರ್ ರ್‍ಯಾಂಕಿನಲ್ಲಿ ನಿರ್ವಹಿಸಿದ ಈ ಜವಾಬ್ದಾರಿ ಈಗ ಒಬ್ಬ ಲೆ. ಜನರಲ್‌ದಾಗಿದೆ - ಅಂದರೆ ಇನ್ನೂ ಎರಡು ರ್‍ಯಾಂಕ್ ಮೇಲಿನದು. ಅಂದ ಮೇಲೆ ನಿಜವಾಗಿಯೂ ನನಗೆ ಈ ಹುದ್ದೆ ದೊರೆತದ್ದು ಒಂದು ಹೆಗ್ಗಳಿಕೆಯೇ ಆಗಿತ್ತು. ಕಾರಣಾಂತರಗಳಿಂದ (ಅಂದರೆ ನನ್ನಲ್ಲಿನ ನ್ಯೂನತೆಗಳಿಂದೇನಲ್ಲ) ಮುಂದಿನ ರ್‍ಯಾಂಕಿಗೆ (ಮೇಜರ್ ಜನರಲ್) ಅರ್ಹನೆಂದು ಘೋಷಿಸಿದ್ದರೂ ಸಹ, ಅದು ಸಕಾಲಕ್ಕೆ ತೆರವಾಗದೇ ನಾನು ಬ್ರಿಗೇಡಿಯರ್ ಆಗೇ ನಿವೃತ್ತನಾಗಬೇಕಾಗಿ ಬಂತು.MCEME ಕಮಾಂಡ್ ಕೂಡ ಕೈತಪ್ಪಿದ್ದರೆ ಅದುdouble tragedy ಅಂತ ನಾನು ಭಾವಿಸಬೇಕಾಗಿತ್ತು. ಆದ್ದರಿಂದ ಅದು ದೊರಕಿದ್ದು ಅದೃಷ್ಟವಲ್ಲದೇ ಮತ್ತೇನು?

ಇದು ನನ್ನ ಅದೃಷ್ಟ ಅನ್ನುವುದಕ್ಕೆ ಇನ್ನೊಂದು ಕಾರಣವೂ ಇದೆ. ಏಕೋ, ಏನೋ ನಾನು ಮೇಜರ್ ಮತ್ತು ಲೆ. ಕರ್ನಲ್ ದರ್ಜೆಯಲ್ಲಿ ಕಮಾಂಡ್ ಅಧಿಕಾರ ಪಡೆದಿದ್ದರೂ ಸಹ, ಮುಂದೆ ಕರ್ನಲ್ ರ್‍ಯಾಂಕಿನಲ್ಲಿ (ಈಗ ಬ್ರಿಗೇಡಿಯರ್) ಒಂದು ಬೇಸ್ ವರ್ಕ್‌ಷಾಪನ್ನು ಕಮಾಂಡ್ ಮಾಡುವ ಅವಕಾಶ ನನಗೆ ಸಿಗಲಿಲ್ಲ. ಅದರ ಬದಲು ದೆಹಲಿಯಲ್ಲೇ ''ರೆವ್ವಿಂಗ್ ಇನ್ ನ್ಯೂಟ್ರಲ್'' (ಹಿಂದಿನ ಪ್ರಸಂಗ ನೋಡಿ) ಹುದ್ದೆಗೆ ತಕ್ಕವನು ಅನ್ನುವ ಧೋರಣೆ ನನ್ನ ಮೇಲಧಿಕಾರಿಗಳಲ್ಲಿ ಬೇರೂರಿತ್ತು ಅಂತ ಕಾಣುತ್ತೆ. ''ನೀನು ಬ್ರಿಗೇಡಿಯರ್ ಆಗುವುದಕ್ಕೆ ಬೇಸ್ ವರ್ಕ್‌ಷಾಪ್ ಕಮಾಂಡ್ ಮಾಡುವ ಅವಶ್ಯಕತೆ ಇಲ್ಲ'' ಅಂತ ಹೇಳಿ, ನಾನುNDC course ಮುಗಿಸಿದ ನಂತರ ಬ್ರಿಗೇಡಿಯರ್ ರ್‍ಯಾಂಕ್ ಕೊಟ್ಟು ಶ್ರೀನಗರಕ್ಕೆ ಕಳುಹಿಸಿದ್ದರು. ಇದರಿಂದ ನನಗೆ ಸ್ವಲ್ಪ ಬೇಸರ ಬಂದಿತ್ತು.

ಆಗಿನ ಕಾಲದಲ್ಲಿ, EMEL ಯಲ್ಲಿ ಬ್ರಿಗೇಡಿಯರ್ ರ್‍ಯಾಂಕಿನ ಹುದ್ದೆಗಳು ಎರಡೇ ಇದ್ದವು. ಎರಡೂ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥನ ಹುದ್ದೆಗಳು ಒಂದು MCEME ಮತ್ತೊಂದು EME School ಬರೋಡ. ಈ ಎರಡು ಹುದ್ದೆಗಳಲ್ಲೂ ಇದ್ದ

ಬ್ರಿಗೇಡಿಯರ್‌ಗಳು ಹೊಸದಾಗಿ ಪೋಸ್ಟ್ ಆಗಿದ್ದುದರಿಂದ ನಮಗೆ ಆ ಅವಕಾಶ ಸಿಗುವ ಸಾಧ್ಯತೆ ಇಂಗಿಹೋಗಿತ್ತು. ಆದರೆ, ಅದೃಷ್ಟವಶಾತ್ MCEMEಯಲ್ಲಿನ ಬ್ರಿಗೇಡಿಯರ್ ಕೆಲವು ತಿಂಗಳುಗಳ ನಂತರ ಒಂದು ಪಬ್ಲಿಕ್ ಸೆಕ್ಟರ್ ಕಂಪನಿಯ ಜನರಲ್ ಮ್ಯಾನೇಜರ್ ಹುದ್ದೆಯನ್ನು ಒಪ್ಪಿ ಜಾಗ ಖಾಲಿ ಮಾಡಿದ. ನಾನು ನನ್ನ ಕೋರಿಕೆಯನ್ನು ನಮ್ಮ EME ಮುಖ್ಯಸ್ಥರ ಮುಂದೆ ಇಟ್ಟೆ. ''ನೀನು ಲೆ. ಕರ್ನಲ್ ಆದಮೇಲೆ ಬೇರಾವ ಹುದ್ದೆ ಕಮಾಂಡ್ ಹುದ್ದೆಯನ್ನೂ ಮಾಡಿಲ್ಲ. MCEMEಯಂತಹ ಪ್ರತಿಷ್ಠಿತ ಸಂಸ್ಥೆಯ ಮುಖ್ಯಸ್ಥನ ಜವಾಬ್ದಾರಿಯನ್ನು ನೀನು ನಿಭಾಯಿಸುವ ಬಗ್ಗೆ ನನಗೆ ಆತಂಕ ಇದೆ.'' ಅಂದರು! ''ನೀವು ನನ್ನನ್ನು ಹೀಗೆ ಅಲ್ಲಗಳೆಯುವುದು ಸರಿಯಲ್ಲ. ನಾನು ಬೇಸ್ ವರ್ಕ್‌ಷಾಪ್ ಕಮಾಂಡ್ ಮಾಡದೇ ಇರುವುದು ನನ್ನ ತಪ್ಪಲ್ಲ. ನಿಮ್ಮ ಕುರ್ಚಿಯನ್ನು ಅಲಂಕರಿಸಿದ್ದ ಇತರರದು. ಈ ನ್ಯೂನತೆಯನ್ನು ಈಗ ಎತ್ತಿ ಹಿಡಿದು ನನಗೆ ಕಮಾಂಡ್ ಕೊಡದೇ ಇರುವುದು ಯಾವ ನ್ಯಾಯ?'' ಅಂದೆ ''ಏನೋ, ಯೋಚಿಸೋಣ'' ಅಂದರು. ''ಯೋಚಿಸೋದು ಏನಿದೆ, ಸರ್? ನನಗೆ ಕಮಾಂಡ್ ಮಾಡಲು ಇದೇ ಕಡೆಯ ಛಾನ್ಸ್. ಇದನ್ನು ನೀಡಲಿಲ್ಲ ಅಂದರೆ ನಾನು ಸರ್ಕಾರದ ಹೊರೆ ಹೊಗಬೇಕಾಗುತ್ತೆ'' ಅಂದೆ. ''ಏನು, ಬೆದರಿಸುತ್ತೀಯಾ?'' ಅಂದರು. ''ನನ್ನ ಅನಿಸಿಕೆ ನಿಮಗೆ ತಿಳಿಸಿದ್ದೇನೆ'' ಅಂದೆ. ಹದಿನೈದು ಇಪ್ಪತ್ತು ದಿನಗಳ ನಂತರ ಫೋನ್ ಮಾಡಿದರು. ''ನಾಗ್... ನಿನಗೆ MCEMEಗೆ ಪೋಸ್ಟಿಂಗ್ ಆಗಿದೆ. I hope you won't let me down'' ಅಂದರು. "Thank you. Sir... I won't" ಅಂತ ಹೇಳಿದೆ. ಕೆಲವೇ ದಿನಗಳಲ್ಲಿ ಹಿಮಾಛ್ಛಾದಿತ ಶ್ರೀನಗರದ ಕೊರೆಯುವ ಛಳಿಯಿಂದ ಸಿಕಂದರಾಬಾದಿನ ಬೇಸಿಗೆಯ ಧಗೆಗೆ ಒಂದೇ ದಿನದಲ್ಲಿ ಹಾರಿದೆ!

ನನ್ನ ''ಬಾಸ್''ನ ಆತಂಕವೇ ನನಗೆ ಒಂದು challenge ಆಯಿತು. ಜವಾಬ್ದಾರಿ ನಿಭಾಯಿಸುವುದಿರಲಿ. ತರಬೇತಿ ವಿಧಾನಗಳನ್ನು ಪರಿಷ್ಕರಿಸಿ, ಹೊಸ ಹೊಸ ಕ್ರಮಗಳನ್ನು ರೂಢಿಸಿದ್ದೇ ಅಲ್ಲದೆ ಶಿಕ್ಷಕರಲ್ಲೂ, ವಿದ್ಯಾರ್ಥಿಗಳಲ್ಲೂ ಸ್ಫೂರ್ತಿ ಮತ್ತು ಹೊಸ ಚೈತನ್ಯ ಮೂಡಿಸಿದೆನೆಂದು ಗುರುತಿಸಿ ನನಗೆ ರಾಷ್ಟ್ರಪತಿಯವರು ಪದಕವನ್ನೂ ದಯಪಾಲಿಸಿ ಗೌರವಿಸಿದರು!

ಇದೆಲ್ಲಾ ಒಂದು ಕಡೆ ಇರಲಿ. ನಾನು ಇಲ್ಲಿ ನಿಮಗೆ ತಿಳಿಸ ಬಯಸುವುದು ನನ್ನ ಪ್ರತಾಪವಲ್ಲ. ಬದಲಿಗೆ ನನಗೇ ಚೊಳ್ಳೆಹಣ್ಣು ತಿನ್ನಿಸಿ ಬೇಸ್ತು ಬೀಳುವ ಹಾಗೆ ಮಾಡಿದ ಒಬ್ಬ ವಿದ್ಯಾರ್ಥಿಯ 'ಸಾಹಸದ' ಕಥೆ. ಅದಕ್ಕೆ ಮುಂಚೆ, 'ವೈವಿಧ್ಯಮಯ ಜವಾಬ್ದಾರಿಯ ಮತ್ತೊಂದು ತುಣುಕು. ಸಾವಧಾನವಾಗಿ ಓದಿ.

★★★

MCEMEಯದು ಬಹು ಮುಖ ಪ್ರತಿಭೆ. ಅಲ್ಲಿ ಮೆಕಾನಿಕ್‌ಗಳ (ಅಂದರೆ ಮುಖ್ಯವಾಗಿ ಟ್ಯಾಂಕ್ ಮತ್ತು ವಿವಿಧ ರೇಡಿಯೋ ರೇಡಾರ್ ಉಪಕರಣಗಳ ರಿಪೇರಿ) ತರಬೇತಿಯಲ್ಲದೇ ಡಿಪ್ಲೋಮಾ ಸ್ಥರದಲ್ಲಿ NCOಗಳ ತರಪೇತಿ, ಆಫೀಸರ್‌ಗಳಿಗೂ

ಸಹ ವಿವಿಧ ಯುದ್ಧೋಪಕರಣಗಳ ರಿಪೇರಿ ವಿಧಾನಗಳು, post graduate ಸ್ಥರದಲ್ಲಿ automotive, electronic ಮತ್ತು Management ತರಬೇತಿ. ಇವಲ್ಲದೇ ಆಫೀಸರ್‌ಗಳಿಗೆ ಡಿಗ್ರಿ ಸ್ಥರದ ತರಬೇತಿ (JNO ಮಾನ್ಯತೆ) ಕೂಡ ನಡೆಯುತ್ತಿದ್ದವು. (ಈಗ ಏರೋನಾಟಿಕಲ್ ಇಂಜಿನಿಯರಿಂಗ್ ಮತ್ತು ಕಂಪ್ಯೂಟರ್ ಸಿಸ್ಟಮ್ಸ್ ಡೆವಲೆಪ್‌ಮೆಂಟ್ ಸಹ ಸೇರಿಕೊಂಡಿವೆ) ಇಂತಹ ಸಂಸ್ಥೆಯು ಕಮಾಂಡೆಂಟ್‌ಗೆ ಹತ್ತಾರುಕಡೆ ಹಲವಾರು ಬಗೆಯ ಜವಾಬ್ದಾರಿ ಇದರಿಂದ ಅದರಲ್ಲಿನ ವಿದ್ಯಾರ್ಥಿಗಳಲ್ಲಿ ಕಾಲೇಜ್ ಕಮಾಂಡೆಂಟ್ ಒಬ್ಬ ಸರ್ವಜ್ಞನೇ ಸರಿ ಅವನಿಗೆ ತಿಳಿಯದ ವಿಷಯವಾಗಲಿ, ಘಟನೆಗಳಾಗಲಿ ಇರುವುದೇ ಇಲ್ಲ ಅನ್ನುವ ಭಾವನೆ (ಭ್ರಮೆ?) ಸಹಜವಾಗಿಯೇ ಬೇರೂರಿರುತ್ತದೆ. ಕಮಾಂಡೆಂಟ್‌ಗೆ Discipline ಅಥವಾ ಶಿಸ್ತನ್ನು ಕಾಪಾಡುವ ಜವಾಬ್ದಾರಿ ಸಹ ಇರುವುದರಿಂದ ಆತನೊಬ್ಬ 'ಸರ್ವಾಧಿಕಾರಿ' ಎಂದೂ ಸಹಭಾವನೆ ಇರುತ್ತದೆ.

ಇಷ್ಟು ದೊಡ್ಡದಾದ, ವೈವಿಧ್ಯಮಯವಾದ ಕಾಲೇಜಿನ ಪರಿಸರವನ್ನು ಸದಾ ಸಮತೋಲನದಲ್ಲಿಟ್ಟಿರುವುದು ಒಂದು ಪ್ರಯಾಸಕರ ಜವಾಬ್ದಾರಿ ಅಂತಲೇ ಅನ್ನಬಹುದು 'ಪರಿಸರ ಮಾಲಿನ್ಯ' ಆಗಿಂದಾಗ್ಯೆ ಆಗುತ್ತಿದ್ದುದು ಡಿಗ್ರಿ ಕೋರ್ಸ್‌ನ ಯುವ ಆಫೀಸರ್‌ಗಳ (ಕೆಲವರ) ಅತೀವ ವರ್ತನೆಯಿಂದ ಅಂತ ಹೇಳಬಹುದು. ಏಕೆಂದರೆ, ಮೆಕಾನಿಕ್ಸ್ ಮತ್ತು ಡಿಪ್ಲೋಮಾ ಕೋರ್ಸ್ ಮಾಡುತ್ತಿದ್ದ ಸಿಪಾಯಿಗಳ ಮತ್ತು NCOಗಳ ಶಿಸ್ತುಪಾಲನೆಗೆ ಸಾಕಷ್ಟು ಹಂತಗಳಲ್ಲಿ ಅಧಿಕಾರಿವರ್ಗ ಇತ್ತು. ಸಾಮಾನ್ಯವಾಗಿ ಅವು ಶಿಸ್ತು ಮುರಿದ ಘಟನೆಗಳು ಕಮಾಂಡೆಂಟ್ ಗಮನಕ್ಕೆ ಬರುವ ಸಾಧ್ಯತೆ ಬಹಳ ಕಮ್ಮಿಯಾಗಿತ್ತು. ಬಾಕಿ ಕೋರ್ಸ್‌ಗಳನ್ನು ಮಾಡುತ್ತಿದ್ದ ಆಫೀಸರ್‌ಗಳು ಸೇನೆಯಲ್ಲಿ ಸಾಕಷ್ಟು ಪಳಗಿದವರು; ಜವಾಬ್ದಾರಿ ತಿಳಿದವರು; ಸಂಸಾರಸ್ಥರೂ ಸಹ. ಇವರುಗಳ ಶಿಸ್ತಿನ ಬಗ್ಗೆಯೂ ಸಹ ಕಮಾಂಡೆಂಟ್ ಕಾಳಜಿವಹಿಸಬೇಕಾಗಿರಲಿಲ್ಲ. ಆದರೆ ಸ್ವಲ್ಪ ತಲೆನೋವು ತರುತ್ತಿದ್ದವರೆಂದರೆ ಡಿಗ್ರಿ ಕೋರ್ಸ್ ಮಾಡಲು ಬರುತ್ತಿದ್ದ ಯುವ ಆಫೀಸರ್‌ಗಳು. ಇವರುಗಳೆಲ್ಲಾ ಸಾಮಾನ್ಯವಾಗಿ 'ಪಡ್ಡೆಗಳು' ಅಕಾಡಮಿಯಿಂದ ಹೊರಬಂದು ವರ್ಷ, ಎರಡು ವರ್ಷ ಕಳೆದಿರಬಹುದು. ಯೂನಿಟ್ ಅನುಭವ ಸಾಲದು. ಹುರುಪಿನ ವಯಸ್ಸು! ಅಕಾಡಮಿಯ ಕಟ್ಟುನಿಟ್ಟಾದ ಶಿಸ್ತಿನಿಂದ ಬಿಡುಗಡೆ ಹೊಂದಿ ಸ್ವಾತಂತ್ರ್ಯ ಅನುಭವಿಸುತ್ತಿದ್ದವರು. ಹೀಗಾಗಿ ಇವರುಗಳ ಮನೋಭಾವ ವರ್ತನೆ ಬಾಕಿಯವರಿಗಿಂತ ಭಿನ್ನವಾಗಿ ಕೆಲವು ಸಲ ಶಿಸ್ತುಪಾಲನೆಗೆ ಧಕ್ಕೆ ತರುತ್ತಿತ್ತು. ಮೊದಲೆರಡು ತಿಂಗಳಂತೂ ಇವರುಗಳ ಮೇಲೆ ಯಾವಾಗಲೂ ಸ್ವಲ್ಪ ಜಾಸ್ತಿ ನಿಗಾ ಇಟ್ಟಿರಬೇಕಾಗಿತ್ತು. (ಆರು ತಿಂಗಳ ಅಂತರದಲ್ಲಿ ಕೋರ್ಸ್ ಷುರು ಆಗುತ್ತಿತ್ತು) ಇವರುಗಳು ಪರಿಸರಕ್ಕೆ ಹೊಂದಿಕೊಳ್ಳಲು ಇಷ್ಟು ದಿನ ಬೇಕಾಗುತ್ತಿತ್ತು!

ಈ ದಿನಗಳಲ್ಲಿ ಇವರುಗಳು ಸಿಕಂದರಾಬಾದ್, ಹೈದರಾಬಾದ್‌ಗಳಿಗೆ ವಾರಾಂತ್ಯದಲ್ಲಿ ಭೇಟಿಕೊಟ್ಟಾಗ ಸಿನಿಮಾದಲ್ಲೋ, ರೆಸ್ಟೋರೆಂಟ್‌ಗಳಲ್ಲೋ ಏನಾದರೂ ಘರ್ಷಣೆಗಳಿಗೆ ಒಳಗಾಗುತ್ತಿದ್ದರು. ಬಹುಶಃ ಇವರ ವಿಪರೀತ 'ಒಗಲು' ಬೀಳುವ

ಪ್ರವೃತ್ತಿಯೋ ಅಥವಾ ಇತರ ಸಮಾನಸ್ಥ ವಯಸ್ಕರ ಅಸೂಯಾಪರ ಮನೋವೃತ್ತಿಯೋ ಈ ಘರ್ಷಣೆಗೆ ಮೂಲನಾಗಿರುತ್ತಿತ್ತು. ಏನೇ ಇರಲಿ, ಪರಿಸ್ಥಿತಿ ವಿಕೋಪಕ್ಕೆ ತಿರುಗುವ ಮೊದಲೇ ಅದನ್ನು ನಮ್ಮ ಮತ್ತು ಪೋಲೀಸಿನವರ ಮಧ್ಯೆ ಇದ್ದ ಪರಸ್ಪರ ಸೌಹಾರ್ದತೆಯ ಸಹಾಯದಿಂದ ಸಾಂತ್ವನಗೊಳಿಸುತ್ತಿದ್ದೆವು. ಈ ಬಗೆಯ ಬಾಂಧವ್ಯ ಕಾಪಾಡಿಕೊಂಡು ಬರುವ ಜವಾಬ್ದಾರಿ, ಒಬ್ಬ ಮೇಜರ್ - ಅವನ ಹುದ್ದೆಯ ಹೆಸರು Adjutant ಅಂತ-ಗೆ ವಹಿಸಿದ್ದೆವು. ನಾನು ಕಳೆದ ದಿನಗಳಲ್ಲಿ ಒಂದು ದಿನವೂ ಯಾವ ಬಗೆಯ ಸಿವಿಲ್ ಮಿಲಿಟರಿ ಘರ್ಷಣೆ ವಿಕೋಪಕ್ಕೆ ತಿರುಗಿರಲಿಲ್ಲ.

ಎಷ್ಟೇ ಆಗಲಿ ಹುಡುಗರು ನೋಡಿ. ಕಾಲೇಜ್ campus ಇಂದ ಹೊರಗೆ ಹೋಗಿದ್ದಾಗ ಕೆಲವರಿಗೆ ಪ್ರೇಮಾಂಕುರ ಕೂಡ ಸಹಜವಾಗಿಯೇ ಆಗುತ್ತಿತ್ತು. ಆದರೆ ಆಭಾಸಗಳು ಕಮ್ಮಿಯಾಗಿ ಈ ಬಗೆಯ ಪ್ರೇಮ ಕಥೆಗಳು ವಿವಾಹದಲ್ಲಿಯೋ ಅಥವಾ ನೀರು ಸುರಿದ ಕೆಂಡದಂತೆಯೋ ಥಣ್ಣಗಾಗುವುದರಲ್ಲಿ ಪರಿಸಮಾಪ್ತಿಯಾಗುತ್ತಿದ್ದವು. ಆದರೆ, ಒಂದೆರಡು ಸಲ ಪ್ರೇಮ ಕಥೆಗಳ ಸುಖಮಯ ಮುಕ್ತಾಯಕ್ಕೆ ಕಂಟಕ ಒದಗಿ, ಪರಿಸ್ಥಿತಿ ಗಂಭೀರವಾಗಿ ದೂರು ನನ್ನ ವರೆಗೂ ಬಂದಿದ್ದವು. ಹೀಗೆ ಬಂದಾಗ ಮುಖ್ಯವಾಗಿ ಮಿಲಿಟರಿ ಶಿಸ್ತಿನ ದೃಷ್ಟಿಯಿಂದ ಇವುಗಳನ್ನು ಪರಿಶೀಲಿಸುವುದಷ್ಟೇ ಮುಖ್ಯವಾದರೂ ಮಾನವೀಯ ರೀತಿಯಲ್ಲಿ ಇವುಗಳನ್ನು ಪರಿಹರಿಸುವುದೂ ಸಹ ನನ್ನ ಜವಾಬ್ದಾರಿ ಅಂತ ನಾನಂತೂ ಭಾವಿಸಿದ್ದೆ.

ಇದಲ್ಲದೇ ನಮ್ಮ ಆಫೀಸರ್ಸ್ ಮೆಸ್‌ನಲ್ಲಿ ಸಿಂಗಲ್ಸ್ ಆಫೀಸರ್ಸ್ ಕ್ವಾರ್ಟರ್ಸಿನಲ್ಲಿ ಒಬ್ಬಿಬ್ಬರು ಯುವ ಆಫೀಸರ್‌ಗಳು ಶಿಸ್ತು ಮುರಿದು ರಾತ್ರಿ ಹೊತ್ತು ಕದ್ದು ಹುಡುಗಿಯರನ್ನು ಕರೆತರುತ್ತಿದ್ದಾರೆ... ಒಬ್ಬ ವಿದೇಶಿ ಆಫೀಸರ್ ಅಲ್ಲದೆ ಕಾಲೇಜ್ ಸ್ಟಾಫ್‌ನಲ್ಲಿರುವ ಒಬ್ಬ ಕ್ಯಾಪ್ಟನ್ ಸಹ ಈ ಬಗೆಯ ಕೃತ್ಯ ಮಾಡುತ್ತಿದ್ದಾರೆ ಅಂತ ಸಮಾಚಾರ ನನ್ನ ಕಿವಿಗೆ ಬಿದ್ದಿತು. ಇದು ನಿಜವಾಗಿ ಮಿಲಿಟರಿ ಶಿಸ್ತಿನ ಗಂಭೀರ ಉಲ್ಲಂಘನೆಯದಾದ್ದರಿಂದ ಈ ಬಗೆಯ ವರ್ತನೆಯನ್ನು ಮಟ್ಟ ಹಾಕುವುದಲ್ಲದೇ ಅಪರಾಧಿಗಳನ್ನು ಶಿಕ್ಷಿಸುವ ಜವಾಬ್ದಾರಿ ಸಹ ನನ್ನದಾಗಿತ್ತು. ನಾನು ಕಾಲೇಜಿನಲ್ಲಿ ಕಳೆದ ನಾಲಕ್ಕು ವರ್ಷಗಳ ಮೊದಲಲ್ಲೇ ಈ ಎರಡು ಬಗೆಯ ಶಿಸ್ತಿನ ಪ್ರಸಂಗಗಳೂ ನನ್ನ ಮುಂದೆ ಬಂದವು. ಇವುಗಳನ್ನು ನಾವು ಹೇಗೆ ಬಗೆಹರಿಸಿದೆನೆಂಬುದನ್ನು ನಿಮಗೆ ತಿಳಿಸಬೇಕೆಂದು ಅನ್ನಿಸುತ್ತಿದೆ.

★★★

ಮೊದಲನೆಯ ಕೇಸ್... ಪ್ರೇಮಾಂಕುರ ಪ್ರಸಂಗ....

ಒಂದು ದಿನ ಹೈದರಾಬಾದಿನ ಒಂದು ಕಾಲೇಜಿನ ಲೇಡೀಸ್ ಹಾಸ್ಟೆಲ್‌ನಿಂದ ದೂರು ಬಂತು. ''ನಿಮ್ಮ ಕಾಲೇಜಿನ ಆಫೀಸರ್ ಒಬ್ಬ ತೊಂದರೆ ಕೊಡುತ್ತಿದ್ದಾನೆ. ನಮ್ಮ ಹಾಸ್ಟಲಿನಲ್ಲಿರುವ ಹುಡುಗಿಯೊಬ್ಬಳನ್ನು ಗೋಳು ಹುಯ್ದುಕೊಳ್ಳುವುದಲ್ಲದೇ ಹಾಸ್ಟಲಿನ ಶಿಸ್ತಿಗೆ ಧಕ್ಕೆ ತರುವ ರೀತಿಯಲ್ಲಿ ವರ್ತಿಸುತ್ತಿದ್ದಾನೆ ದಯವಿಟ್ಟು ಅವನನ್ನು ತಡೆಯಿರಿ.

ಇಲ್ಲದಿದ್ದರೆ ನಾವು ಪೋಲಿಸ್ ಕಂಪ್ಲೇಂಟ್ ಕೊಡಬೇಕಾಗುತ್ತೆ'' ಅಂತ. ''ಕಂಪ್ಲೇಂಟ್, ಗಿಂಪ್ಲೇಂಟ್ ಕೊಡಬೇಡಿ ಅದರಿಂದ ನಮಗೂ ತೊಂದರೆ ನಿಮಗೂ ತೊಂದರೆ. ನಾವೇ ಅದನ್ನು sort out ಮಾಡುತ್ತೇವೆ'' ಅಂತ ಹೇಳಿ ನನ್ನ adjutant ವಿಷಯ ನನಗೆ ತಿಳಿಸಿದ. ಆಫೀಸರ್ ಡಿಗ್ರಿ ಕೋರ್ಸ್ ಮಾಡುತ್ತಿದ್ದ ಅವನನ್ನು ಕರೆದು, ನನ್ನ ಡೆಪ್ಯುಟಿ ಕಮಾಂಡೆಂಟ್ ವಿಚಾರಿಸಿ ವಿಷಯ ತಿಳಿದು ನನ್ನ ಬಳಿ ಬಂದು ''ವಿಷಯ ಗಂಭೀರವಾಗಿದೆ ಸರ್. ಹುಡುಗ, ಹುಡುಗಿ ಇಬ್ಬರೂ ಒಬ್ಬರನ್ನೊಬ್ಬರು ಪ್ರೀತಿಸುತ್ತಿದ್ದಾರಂತೆ. ಆದರೆ ವಿಷಯ ಹುಡುಗಿಯ ಲೋಕಲ್ ಗಾರ್ಡಿಯನ್‌ಗೆ ಗೊತ್ತಾಗಿ ವಿದೇಶದಲ್ಲಿರುವ ಅವಳ ತಂದೆ, ತಾಯಿಗೆ ಸಮಾಚಾರ ಹೋಯಿತಂತೆ ಅವರು ತಮ್ಮ ಮಗಳ ಈ ಪ್ರೇಮ ವಿವಾಹಕ್ಕೆ ಒಪ್ಪುತ್ತಿಲ್ಲವಂತೆ. ಅಡ್ಡಿ, ಆತಂಕ ಒಡ್ಡುತ್ತಿದ್ದಾರಂತೆ ಹುಡುಗಿ ದ್ವಂದ್ವಕ್ಕೆ ಸಿಕ್ಕಿ ಕಡೆಗೆ ತನ್ನ ಪ್ರೇಮ ಸಂಬಂಧ ಮುರಿಯಲು ನಿರ್ಧರಿಸಿದಳು ಆದರೆ ಇವನು ಬಿಡುತ್ತಿಲ್ಲ.... ಅವಳ ಮನಸ್ಸು ಒಲಿಸಲು ಪ್ರಯತ್ನಿಸುತ್ತಿದ್ದಾನೆ. ಸ್ವಲ್ಪ ಹುಚ್ಚು ಹುಚ್ಚಾಗಿ ಆಡುತ್ತಿದ್ದಾನೆ. straight forward discipline case ಆಗಿ ಪರಿಗಣಿಸಲು ಸಾಧ್ಯವಿಲ್ಲ ಅಂತ ತೋರುತ್ತೆ'' ಅಂತ ರಿಪೋರ್ಟ್ ಕೊಟ್ಟ ವಿಚಾರಣೆ ಮುಂದುವರೆಸಲು adjutantಗೆ ಹುಡುಗಿಯ ಲೋಕಲ್ ಗಾರ್ಡಿಯನ್‌ನನ್ನು ಸಂದರ್ಶಿಸಲು ಕಳುಹಿಸಿದೆ. (ಅವರು ಒಬ್ಬ ಮಹಿಳೆ) ಅವನ ರಿಪೋರ್ಟ್ ಬಂತು. ವಿಷಯ ಸೀರಿಯಸ್ ಅಂತಲೇ ಅಂದುಕೊಂಡು, ನನ್ನ ಹೆಂಡತಿಯ ಸಹಾಯ ಪಡೆದು ಆಕೆಗೆ ಹೇಳಿ ಕಳುಹಿಸಿದೆ. ''ನಮ್ಮ ಆಫೀಸರ್ಸ್ ಮೆಸ್‌ನಲ್ಲಿಯ ಲೇಡಿಸ್ ರೂಂಗೆ ನೀವು ಹುಡುಗಿ ಜೊತೆ ಹೋಗಿ ಬರಲು ಸಾಧ್ಯವೇ? ಅಲ್ಲಿ ನನ್ನ ಹೆಂಡತಿ ಮತ್ತು ಇನ್ನಿಬ್ಬರು ನಮ್ಮ ಸೀನಿಯರ್ ಆಫೀಸರ್‌ಗಳ ಹೆಂಡತಿಯರೊಂದಿಗೆ ಸಮಾಲೋಚನೆ ನಡೆಸಿ ಮುಂದಿನ ಕ್ರಮ ಕೈಗೊಳ್ಳೋಣ... ಕಾರ್ ಕಳುಹಿಸುತ್ತೇನೆ'' ಅಂತ. ಅವರು ಒಪ್ಪಿ ಬಂದರು.

ಮೊದಲು ಹೆಂಗಸರುಗಳು ಸುಮಾರು ಮುಕ್ಕಾಲು, ಒಂದು ಘಂಟೆ ಸಮಾಲೋಚನೆ ನಡೆಸಿದರು. ನಂತರ ನನಗೆ ಕರೆ ಕಳುಹಿಸಿದರು. ನಾನು ನನ್ನ ಡೆಪ್ಯುಟಿ ಸಮೇತ ಅವರ ಸಮಾಲೋಚನೆಯಲ್ಲಿ ಪಾಲ್ಗೊಂಡು, ನಂತರ ಹುಡುಗನಿಗೆ ಹೇಳಿ ಕಳುಹಿಸಿದೆವು ವಿಷಯ ಪರಿಶೀಲಿಸಿದಾಗ ಹುಡುಗಿಯ ತಂದೆ ತಾಯಿ ಪರದೇಶದವರೆಂದೂ (ಬಿಳಿಯರಲ್ಲ) ಅವರಿಗೆ ಇಷ್ಟವಿಲ್ಲವೆಂದೂ, ಹುಡುಗಿಗೆ ಎರಡು ಮನಸ್ಸಿದ್ದು ಕಡೆಗೆ ಪ್ರಿಯತಮನನ್ನು ಮರೆಯುವುದೇ ಲೇಸೆಂಬ ದೃಢ ನಿರ್ಧಾರಕ್ಕೆ ಬಂದಿದ್ದಾಳೆಂದೂ ತಿಳಿಯಿತು. ಅದರಂತೆ ಅವಳು ಹುಡುಗನಿಗೆ ಖಡಾಖಂಡಿತವಾಗಿ ತಿಳಿಸಿದ್ದರೂ ಸಹ ಅವನು ಸುಮ್ಮನೆ ಅವಳನ್ನು ಕಾಡಿಸಿ, ಪೀಡಿಸುತ್ತಾ ಇದ್ದಾನೆಂದೂ ಇದನ್ನು ನಿಲ್ಲಿಸಬೇಕೆಂದೂ ಹೇಳಿದಳು. ಹುಡುಗ, ಹುಡುಗಿಯ ಮುಖಾಮುಖಿ ಮಾಡಿಸಿದ ಮೇಲೂ ತನ್ನ ನಿರ್ಧಾರ ಅವಳು ಬದಲಿಸಲಿಲ್ಲ. ಈ ಸಂಬಂಧ ಸಾಧ್ಯವಿಲ್ಲವೆಂದು ತಿಳಿಸಿ ಅವರುಗಳನ್ನು ಕಳುಹಿಸಿಕೊಟ್ಟೆವು. ಹುಡುಗನನ್ನು ಮತ್ತೆ ಆಫೀಸಿಗೆ ಕರೆಸಿ ಸಮಂಜಸವಾದ ಸಲಹೆ, ಸ್ವಲ್ಪ ಬೆದರಿಕೆ ಇವುಗಳನ್ನು ಕೊಟ್ಟು ಪ್ರಯಾಸದಿಂದ ನಮ್ಮ ನಿರ್ಧಾರ ಸರಿ ಎಂದು ಒಪ್ಪಿಸಿದ್ದಾಯಿತು... ಅವನು ಹಾಸ್ಟಲ್ ಕಡೆ ಸುಳಿಯುವುದಾಗಲಿ, ಹುಡುಗಿಯನ್ನು ಕಾಣುವುದಾಗಲಿ ಮಾಡಕೂಡದೆಂದು ತಾಕೀತು ಮಾಡಿದ್ದಾಯಿತು.... ಶಿಸ್ತುಭಂಗ ಪ್ರಸಂಗ ತಪ್ಪಿತು!

★★★

ಇನ್ನು ಎರಡನೆಯ ಪ್ರಾಬ್ಲಮ್... ಅದೇ ಸಿಂಗಲ್ ಆಫೀಸರ್ಸ್ ಕ್ವಾರ್ಟರ್ಸ್‌ನಲ್ಲಿ ನಡೆಯುತ್ತಿದ್ದ ಶಿಸ್ತು ಉಲ್ಲಂಘನೆ ವಿಷಯ.... ಇಲ್ಲೇ ನಾವೆಲ್ಲಾ ಬೇಸ್ತು ಬಿದ್ದಿದ್ದು.... ಹೇಗೆ ಅಂತೀರಾ? ಕೇಳಿ.

ನಾನು ಮೊದಲೇ ತಿಳಿಸಿರುವಂತೆ ಇಬ್ಬರು ಯುವ ಆಫೀಸರ್‌ಗಳು ಈ ಬಗೆಯ ವರ್ತನೆಯಲ್ಲಿ ತೊಡಗಿದ್ದಾರೆಂದು ತಿಳಿದ ಮೇಲೆ ಅಪರಾಧಿಗಳನ್ನು Red handed ಆಗಿ ಹಿಡಿಯಬೇಕೆಂದು ನಿರ್ಧರಿಸಿದೆ. ಈ ಬಗೆಯ ವರ್ತನೆ (ರೂಂಗಳಿಗೆ ಹುಡುಗಿಯರನ್ನು ಕರೆತರುವುದು) ಬಹಳ ಗಂಭೀರವೂ ಮತ್ತು ಶಿಕ್ಷಾರ್ಹವೂ ಆಗಿದ್ದುದರಿಂದ ಇದನ್ನು ಮಟ್ಟಹಾಕುವುದು ಅವಶ್ಯಕವಾಗಿತ್ತು. ಆದರೆ ನಮ್ಮ ಮೊದಲಿನ ಪ್ರಯಾಸಗಳು ಫಲಿಸಲಿಲ್ಲ. ಬಹುಶಃ ಶಾಮೀಲಾಗಿದ್ದಾನೆಂದು ಶಂಕಿಸಲಾಗಿದ್ದ ಸ್ಟಾಫ್ ಆಫೀಸರ್ ಸತರ್ಕನಾಗಿದ್ದುದಲ್ಲದೇ, ಇತರ ಅಪರಾಧಿಗೂ ಚೇತಾವಣಿ ಕೊಡುತ್ತಿದ್ದ ಅನ್ನುವ ಸಂಶಯ ಬಂತು... ಈ ಸ್ಟಾಫ್ ಆಫೀಸರ್ ಯಾರು ಎಂದು ಪತ್ತೆ ಹಚ್ಚಲು ಅಷ್ಟೇನು ಪ್ರಯಾಸಕರವಾಗಿರಲಿಲ್ಲ... ನಾನು ''ವನವಾಸವೈಭವ'' ದಲ್ಲಿ ತಿಳಿಸಿರುವಂತೆ ಈ ಬಗೆಯ ವರ್ತನೆ ನಮಗೆ ನೇರವಾಗಿ ಗೋಚರವಾಗದಿದ್ದರೂ ಬೇರೆ ಬಗೆಯ ನಡವಳಿಕೆಗಳಿಂದ ಯಾರೆಂದು ಊಹಿಸಬಹುದು. ಹಾಗೇ ಇಲ್ಲೂ ಸಹ ಈ ಆಫೀಸರ್ ಯಾರು ಎನ್ನುವುದನ್ನು ಕಂಡುಹಿಡಿದೆವು. ಆದರೆ, ಈ ಬಾರಿ ನೇರವಾಗಿ ಅವನ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಲು ಪ್ರಯತ್ನಿಸಲಿಲ್ಲ. ನನ್ನ ಮುಖ್ಯ ಉದ್ದೇಶ ಈ ಬಗೆಯ ವರ್ತನೆಗೆ ಮಟ್ಟ ಹಾಕಬೇಕೆಂಬುದೇ ಆಗಿದ್ದರಿಂದ ಇದಕ್ಕೆ ಬೇರೆ ಯಾರು ಯಾರು ಶಾಮೀಲಾಗಿದ್ದಾರೆ ಅನ್ನುವುದನ್ನು ತಿಳಿದುಕೊಳ್ಳುವುದು ಅವಶ್ಯಕವಾಗಿತ್ತು. ಶಿಕ್ಷಿಸಲು ಮುಖ್ಯವಾಗಿ ಸಾಕ್ಷ್ಯಾಧಾರಗಳು ಬೇಕಾಗಿದ್ದವು. ಇದಕ್ಕಾಗಿ ನಾನು ಮತ್ತು ನನ್ನ ಡೆಪ್ಯುಟಿ ಒಂದು ತಂತ್ರ ಹೂಡಿದೆವು... ಅದೇ... ನೀವು ಕೇಳಿದ್ದೀರಲ್ಲಾ... Set a thief to catch a thief ಅಂತ. ಈ ನಾಣ್ನುಡಿಯನ್ನು ಅನುಷ್ಠಾನಕ್ಕೆ ತರಲು ನಿರ್ಧರಿಸಿದೆವು.

ಶಾಮೀಲಾಗಿದ್ದನೆಂದು ಹೆಸರಿಸಿದ ಸ್ಟಾಫ್ ಆಫೀಸರ್ ಮೇಧಾವಿ; ಧೈರ್ಯಶಾಲಿ; ಬುದ್ಧಿವಂತ. ಆದರೆ ಸ್ವಲ್ಪ ಮಟ್ಟಿಗೆ ಬೇಜವಾಬ್ದಾರಿ ಮನುಷ್ಯ... ಅಡ್ಡದಾರಿಗೆ ಬಿದ್ದಿದ್ದ. ಅವನನ್ನು ಶಿಕ್ಷಿಸುವ ಬದಲು ನಮ್ಮ ತಂತ್ರಕ್ಕೆ ಬಳಸಿಕೊಂಡೆವು. ಅವನನ್ನು ತಾತ್ಕಾಲಿಕವಾದ Adjutant ಹುದ್ದೆಗೆ ನಿಯೋಜಿಸಿದೆ. (Adjutant ಆಗಿದ್ದ ಮೇಜರ್ ರಜೆಯ ಮೇಲಿದ್ದ) ಅವನು ಹೆಡ್‌ಕ್ವಾರ್ಟರ್ಸ್‌ಗೆ ರಿಪೋರ್ಟ್ ಮಾಡಿಕೊಂಡ ಮೇಲೆ ಮೊದಲ interview ನಲ್ಲಿ ಅವನಿಗೆ ತಾಕೀತು ಮಾಡಿದೆ. ''ಮೆಸ್‌ನಲ್ಲಿ ನಿನ್ನ ನಡವಳಿಕೆ ಬೇಜವಾಬ್ದಾರಿಯುತ ಅಂತ ರಿಪೋರ್ಟ್ ಬಂದಿದೆ. ಆದರೂ ನಿನ್ನ ಪ್ರತಿಭೆಯನ್ನು ಗುರುತಿಸಿ ನಿನಗೆ ಈ ಗುರುತರವಾದ ಜವಾಬ್ದಾರಿ ವಹಿಸುತ್ತಿದ್ದೇನೆ. ಆಫೀಸರ್‌ಗಳ ಅದರಲ್ಲೂ ಡಿಗ್ರಿ ಆಫೀಸರ್‌ಗಳ ನಡವಳಿಕೆ ಮೇಲಿನ ಉಸ್ತುವಾರಿ ನಿನ್ನದು... ತಿಳಿಯಿತೇ?'' ಅಂತ ಕೇಳಿದೆ. "Yes, Sir" ಅಂದ. "ok good luck you may go" ಅಂದೆ ಸ್ಮಾರ್ಟ್ ಆಗಿ ಸಲ್ಯೂಟ್ ಮಾಡಿ ಹೊರ ಹೊಟರ. ಬಾಗಿಲ ಬಳಿ ಸೇರುವುದರ ಒಳಗೆ, "Wait... ಸಿಂಗಲ್ ಆಫೀಸರ್ಸ್ ಕ್ವಾರ್ಟರ್ಸ್‌ಗೆ ಹುಡುಗಿಯರನ್ನು ಕರೆತರುವ ಹವ್ಯಾಸ ಷುರು

ಆಗಿದೆ ಅಂತ ಕೇಳಿದೆ. ನಿಮಗೇನಾದರೂ ಇದರ ಬಗ್ಗೆ ಗೊತ್ತಿದೆಯೇ?'' ಅಂದೆ. ಸ್ವಲ್ಪವೂ ತಡಬಡಿಸದೆ ''ಗೊತ್ತು, ಸರ್'' ಅಂದ! ''ಹಾಗಾದರೆ ಇನ್ನೊಂದು ವಾರದೊಳಗೆ ಅಂತಹವರನ್ನು ಸಬೂತು ಸಮೇತ ನನ್ನ ಮುಂದೆ ಹಾಜರ್‌ಪಡಿಸಬೇಕು'' ಅಂದೆ. "Yes, Sir" ಅಂತ ಹೇಳಿ ಹೊರಬಿದ್ದ. ವಾರದೊಳಗೆ ಒಬ್ಬ ಆಫ್‌ಘಾನ್ ಆಫೀಸರ್‌ನನ್ನು ಸಬೂತು ಸಮೇತ ಹಿಡಿದ! ರಿಪೋರ್ಟ್ ಕೊಟ್ಟ.

ಈ ಆಫ್‌ಘಾನ್ ಆಫೀಸರ್ ಈಗಾಗಲೇ ನನ್ನ ಮುಂದೆ ಹಾಜರ್ ಪಡಿಸಲ್ಪಟ್ಟಿದ್ದ. ಓದಿನಲ್ಲಿ ಹಿಂದೆ ಬಿದ್ದಿರುವುದಕ್ಕಲ್ಲದೇ ಶಿಸ್ತು ಮುರಿದ ಆಪಾದನೆಗಳ ಮೇಲೆ ಸಹ. ಈ ಸಲ ಮತ್ತೆ ಆರೋಪಿಯಾಗಿ ಬಂದಾಗ ''ನಿನಗೆ ಈಗಾಗಲೇ ಸಾಕಷ್ಟು warning ಕೊಟ್ಟು ಆಗಿದೆ. ನೀನು ಕೋರ್ಸ್‌ನಲ್ಲಿ ಸಹ ಅಷ್ಟು ಮುತುವರ್ಜಿ ವಹಿಸಿಲ್ಲ. ಇದುವರೆವಿಗೂ ಎಲ್ಲಾ ಟೆಸ್ಟ್‌ಗಳಲ್ಲೂ ಫೇಲ್ ಆಗಿದ್ದೀಯ ಆದ್ದರಿಂದ ನಿನ್ನನ್ನು ಡಿಗ್ರಿ ಕೋರ್ಸ್‌ನಿಂದ ತೆಗೆದುಹಾಕಿ ನಿನ್ನ ದೇಶಕ್ಕೆ ವಾಪಸ್ ಕಳುಹಿಸಲು ತೀರ್ಮಾನಿಸಿದ್ದೇನೆ. ಇಷ್ಟರಲ್ಲೇ ದೆಹಲಿಯಲ್ಲಿನ ನಿಮ್ಮ ದೂತಾವಾಸಕ್ಕೆ ಕಳುಹಿಸುತ್ತಿದ್ದೇನೆ. ಸಿದ್ಧನಾಗು. Now Dismiss! ಅಂತ ಹೊರಗೆ ಕಳುಹಿಸಿದೆ. ಮೇಲಾಧಿಕಾರಿಗಳು ಸ್ವಲ್ಪ ಅಳುಕಿದರೂ (ಅಂತರ ರಾಷ್ಟ್ರೀಯ ಹಗರಣವಾಗಬಹುದೇನೋ ಅಂತ) ಕಡೆಗೆ ನನ್ನ ನಿರ್ಧಾರವನ್ನು ದೃಢಪಡಿಸಿದರು. ಅವನ ಜೊತೆ ಮತ್ತೊಬ್ಬ ಆಫ್‌ಘಾನ್ ಆಫೀಸರ್‌ನ ಕಳುಹಿಸಿ ಅವನನ್ನು ದೆಹಲಿಯಲ್ಲಿನ ದೂತಾವಾಸಕ್ಕೆ ಒಪ್ಪಿಸಿ ಬರುವಂತೆ ಆಜ್ಞೆ ಹೊರಡಿಸಿದೆ... ಅವನು ಹೊರಡಲು ಒಂದೆರಡು ದಿನಗಳಿದ್ದಾಗ ಒಂದು ರಾತ್ರಿ....

ಸುಮಾರು 12, 12.30 ಇರಬಹುದು. ನನ್ನ ಮಂಚದ ಪಕ್ಕದಲ್ಲಿದ್ದ ಟೆಲಿಫೋನ್ ಹೊಡೆದುಕೊಳ್ಳಲು ಷುರುಮಾಡಿತು. 'ಇಷ್ಟು ಹೊತ್ತಿನಲ್ಲಿ ಏನು ಎಮರ್ಜೆನ್ಸಿ ಬಂತಪ್ಪಾ?' ಅಂತ ಅಂದುಕೊಂಡು ಫೋನ್ ಎತ್ತಿ "Yes?" ಅಂದೆ. ಮುಂದಿನ ಸಂವಾದ ಈ ರೀತಿ ನಡೆಯಿತು.

""Good Evening Sir. Duty officer here, Sir, Sorry to distrub you at this hour, Sir..."

""I say cut it out ಏನು ವಿಷಯ ಹೇಳು''

''ಸರ್, ಈ ಆಫ್‌ಘಾನ್ ಆಫೀಸರ್, ಕ್ಯಾಪ್ಟನ್... ನಿಮ್ಮ ಹತ್ತಿರ ಅರ್ಜೆಂಟಾಗಿ ಮಾತನಾಡಬೇಕಂತೆ.''

''ಅವನಿಗೇನು ಹುಚ್ಚು ಗಿಚ್ಚು ಹಿಡಿದಿದೆಯೋ ಇಷ್ಟು ಹೊತ್ತಿನಲ್ಲಿ ನನ್ನನ್ನು ಎಬ್ಬಿಸೋಕೆ? ಬೆಳಗ್ಗೆ ಅಡ್ಜುಟೆಂಟ್ ಮೂಲಕ ಆಫೀಸಿನಲ್ಲಿ ಬಂದು ನೋಡು ಅಂತ ಹೇಳು.. ಇಷ್ಟಕ್ಕೆಲ್ಲಾ ನೀನ್ಯಾಕೆ ಈ ಹೊತ್ತಿನಲ್ಲಿ ಫೋನ್ ಮಾಡಿದೆ?''

ನಾನೆಲ್ಲಾ ಹೇಳಿದೆ ಸರ್... ಆದರೆ ಅವನದು ಒಂದೇ ಹಟ ಆಗಿದೆ, ಸರ್ ನನ್ನನ್ನು ಗೋಳುಹುಯ್ದುಕೊಳ್ಳುತ್ತಿದ್ದಾನೆ. ಅದೇನೋ ಮದುವೆ... ಹನಿಮೂನ್ ಅಂತ ಬಡಬಡಿಸುತ್ತಿದ್ದಾನೆ.''

''ಮದುವೆ? ಯಾರಿಗೆ? ಅವನಿಗೇ?.... ಆಗಲೇ ಒಬ್ಬ ಹೆಂಡತಿ ತನ್ನ ದೇಶದಲ್ಲಿದ್ದಾಳೆ. ಆರು ಮಕ್ಕಳು ಅಂತ ಹೇಳ್ತಾ ಇದ್ದ! ಇವನಿಗೇನು ಬಂತಂತೆ? ಆದರೂ... ಮದುವೆ ಮಾಡಿಕೊಂಡಿದ್ದರೆ ಮಾಡಿಕೊಳ್ಳಲಿ ನನಗೇನು? ನನ್ನCongrats ಹೇಳಿ ಹೊರಗೆ ಅಟ್ಟು...''

''ಸರ್, ಸರ್... ಒಂದು ನಿಮಿಷ ಸರ್... ನಾನು ಸರ್ ಕ್ಯಾಪ್ಟನ್... ಮಾತನಾಡುತ್ತಿರುವುದು ನಿಮ್ಮ ಸರ್ಕಾರ ನಮಗೆ ಬಹಳ ಸಹಾಯ ಮಾಡಿದೆ ಸರ್... ನಾವು ಬಡವರು... ನೀವೂ ಸಹ ನಮ್ಮನ್ನೆಲ್ಲಾ ಚೆನ್ನಾಗಿ ನೋಡಿಕೊಳ್ಳುತ್ತಿದ್ದೀರಿ, ಸರ್....''

''ನೋಡು... ಈ ಮಸ್ಕ ಎಲ್ಲಾ ಈಗ ಬೇಡ. ನಾಳೆ ಬಳಿಗ್ಗೆ ನಿನ್ನ ಅಹವಾಲು ಏನು ಅಂತ ವಿಚಾರಿಸೋಣ...''

''ಸರ್... ಸರ್.... ಇಲ್ಲಾ ಸರ್... ನೀವು ನನ್ನ ಹೇಗೂ ವಾಪಸ್ ಕಳುಹಿಸುತ್ತಿದ್ದೀರಿ ಸರ್... ಇನ್ನೆರಡೇ ದಿನ... ಈ ಸಂಜೆ ನಾನು ಮದುವೆ ಮಾಡಿಕೊಂಡಿದ್ದೇನೆ ಸರ್... ಮತ್ತೆ...''

''ಅಲ್ಲಯ್ಯಾ ಈಗಾಗಲೇ ನನಗೆ ಮದುವೆ ಆಗಿ ಆರು ಮಕ್ಕಳು ಅಂತ ಹೇಳಿದ್ದೀಯ ಈಗೆಂತಹ ಮದುವೆ?''

''ನಿಜ ಸರ್... ಆದರೆ ನಮ್ಮಲ್ಲಿ ಇನ್ನೊಂದು ಮದುವೆಗೆ ಅಭ್ಯಂತರ ಇಲ್ಲ ಸರ್... ಈ ಹುಡುಗಿ, ನಾನು ಪ್ರೀತಿಸಿ ಮದುವೆ ಆಗಿದ್ದೀವಿ ಸರ್... ಈ ರಾತ್ರಿ ನನ್ನ ಹೆಂಡತೀನ ನನ್ನ ರೂಮಿನಲ್ಲಿಟ್ಟುಕೊಂಡಿರಲು permission ಬೇಕು ಸರ್.''

''ಏನು?... ಸಾಧ್ಯವಿಲ್ಲ... ನಿನಗೆ ಗೊತ್ತಿಲ್ಲವೇ?... :Ladies are not allowed in single officers quarters... ಬೇಕಾದರೆ ಹೈದರಾಬಾದಿನಲ್ಲೋ, ಸಿಕಂದರಾಬಾದಿನಲ್ಲೋ ಯಾವುದಾದರೂ ಹೋಟೆಲಿಗೆ ಹೋಗು permission ಕೊಡುತ್ತೇನೆ. ಆದರೆ ಬೆಳಿಗ್ಗೆ ಪೆರೇಡ್ ಟೈಂಗೆ ಹಾಜರಿರಬೇಕು.''

''ಸರ್... ಸರ್... ನಾನು ಬಡವ ಸರ್... ನನಗೆ ಬರೋ ಸಂಬಳ ತೀರ ಸ್ವಲ್ಪ. ಈಗಾಗಲೇ ಒಂದು ಸಂಸಾರ ತೂಗಿಸುತ್ತಿದ್ದೇನೆ ಸರ್... ಹೋಟೆಲ್ ಖರ್ಚು ನನ್ನಿಂದ ಭರಿಸಲು ಸಾಧ್ಯವಿಲ್ಲ ಸರ್. ದಯವಿಟ್ಟು ಇವತ್ತೊಂದು ರಾತ್ರಿ ಸರ್...''

''ಒಳ್ಳೇ ಗ್ರಹಚಾರಕ್ಕೆ ಬಂತಲ್ಲಾ!... No, means no.... ಡ್ಯೂಟಿ ಆಫೀಸರ್‌ಗೆ ಫೋನ್ ಕೊಡು''

''ಡ್ಯೂಟಿ ಆಫೀಸರ್ ಹಿಯರ್ ಸರ್''

"I say ಏನು ಇವನು ಹೇಳ್ತಾ ಇರೋದು? ಮದುವೆ ಗಿದುವೆ ಅಂತ... ಎಷ್ಟು ನಿಜ ಅಂತ ನಿನಗೇನಾದರೂ ಗೊತ್ತೇನು?proof ಏನು ತೋರಿಸಿದಾನೆ?''

''ಸರ್ ಹೊರಗೆ ಎರಡು ಆಟೋಗಳು ನಿಂತಿವೆ ಸರ್.. ಅವುಗಳ ಪಕ್ಕದಲ್ಲಿ ಒಬ್ಬ ಬಿಳೀ ಗಡ್ಡದ ಮನುಷ್ಯ ಸ್ವಲ್ಪ ವಯಸ್ಸಾದವರು ನಿಂತಿದ್ದಾರೆ ಸರ್. ಜೊತೆಗೆ ಒಬ್ಬ

ಯುವತಿ ಮತ್ತು ಒಬ್ಬ 12-14 ವರ್ಷದ ಹುಡುಗ ಕೂಡ ಇದ್ದಾರೆ... ವಿಚಾರಿಸಿದ್ದರೆ ಆ ಹುಡುಗಿ ಇವನ ಹೆಂಡತಿ ಅಂತಲೂ ಬಿಳಿ ಗಡ್ಡದವ ಅವಳ ತಂದೆ ಮತ್ತು ಆ ಹುಡುಗ ಅವಳ ತಮ್ಮ ಅಂತ ಹೇಳುತ್ತಿದ್ದಾರೆ ಸರ್.''

''ನಿನಗೇನನಿಸುತ್ತೆ?''

''ನಿಜಾನೇ ಹೇಳ್ತಿರಬಹುದು ಸರ್... ಇಂತಹ ವಿಚಾರಗಳಲ್ಲಿ ಯಾರೂ ಈ ತರಹೆಯ ಸುಳ್ಳು ಹೇಳುವುದಿಲ್ಲ, ಅಂತ ನನ್ನ ಅನಿಸಿಕೆ.''

ಮಧ್ಯರಾತ್ರಿ! ಅರೆನಿದ್ರೆ! ಕಣ್ಣೆಳೆದುಕೊಂಡು ಹೋಗುತ್ತಿದೆ... ವಿಚಾರಶಕ್ತಿ ಬಹುಶಃ ಕುಂದಿರಬಹುದು!... ಮರುಕ ಬಂತು... ಹೇಗೂ ಮದುವೆ ಮಾಡಿಕೊಂಡಿರುವುದು ಸಾಬೀತಾದ ಹಾಗೆ ಆಗಿದೆ.... ಎರಡು ದಿನದಲ್ಲಿ ತೊಲಗುತ್ತಾನೆ. ಅವನFinancial position ಅಷ್ಟೇನು ಚೆನ್ನಾಗಿಲ್ಲ ಅಂತ ನನಗೂ ಗೊತ್ತು... ಸರಿ... ನಿರ್ಧಾರಕ್ಕೆ ಬಂದು. ಡ್ಯೂಟಿ ಆಫೀಸರ್‌ಗೆ ಹೇಳಿದೆ.

''ಮೆಸ್ NCOನ ಕರೆದು ನನ್ನ ಒಪ್ಪಿಗೆ ಇದೆ ಅಂತ ಹೇಳಿ. ಇವನಿಗೆ ಒಂದು ಗೆಸ್ಟ್‌ರೂಂ ಈ ರಾತ್ರಿಗೆ ಕೊಡು, ಅಂತ ಹೇಳು... ಹಾಂ VIP guest ರೂಂಗಳಲ್ಲಿ... ಮೆಸ್ ಹಿಂದೆ ಇವೆಯಲ್ಲಾ ಅವುಗಳಲ್ಲಿ ಒಂದು ಕೊಡು ಅನ್ನು ಡೆಪ್ಯುಟಿಗೂ ವಿಷಯ ತಿಳಿಸು. ಆದರೆ ಈಗ ಎಬ್ಬಿಸಬೇಡ. ಬೆಳಗಾಗಲಿ... Good Night" ಅಂದು ಫೋನ್ ಕೆಳಗಿಟ್ಟೆ.

★★★

ಅವನೇನೋ ಎರಡು ದಿನಗಳಲ್ಲಿ ಹೊರಟು ಹೋದ. ನನ್ನ ತಾತ್ಕಾಲಿ ಅಡ್ಜುಟೆಂಟ್ ವಹಿಸಿದ ಕೆಲಸ ಸಮರ್ಪಕವಾಗಿ ನಿರ್ವಹಿಸಿದ. ಶಿಸ್ತು ಭಂಗ ನಿಂತಂತೆ ಕಂಡಿತು. ಮೊದಲಿನ ಅಡ್ಜುಟೆಂಟ್ ಕಾರ್ಯ ವಹಿಸಿಕೊಂಡ... ಅವನನ್ನು ಕರೆದು ಕಥೆ ಹೇಳಿ ''ಸ್ವಲ್ಪ ತನಿಖೆ ನಡೆಸು... ಆ ಹುಡುಗಿ ಯಾರು? ಮದುವೆಗೆ ಹೇಗೆ ಒಪ್ಪಿಕೊಂಡಳು? ಮನೆಯವರು ತಾನೇ ಹೇಗೆ ಒಪ್ಪಿದರು? ಅಂತ'' ಅಂತ ಹೇಳಿದೆ.

ಎರಡು ದಿನಗಳ ಮೇಲೆ ಅಡ್ಜುಟೆಂಟ್ ನನ್ನ ಬಳಿ ಬಂದ.

''ಸರ್... ಎಲ್ಲರಿಗೂ ಚೊಳ್ಳೇಹಣ್ಣು ತಿನ್ನಿಸಿದ ಅಂತ ಕಾಣುತ್ತೆ... ನಾವೆಲ್ಲಾ ಬೇಸ್ತು ಬಿದ್ದಿದ್ದೇವೆ.'' ಅಂದ!

''ಅದು ಹೇಗೆ?''

''ನಾನು ವಿಚಾರಿಸಿದೆ, ಸರ್... ಹುಡುಗಿ ಯಾರು ಅಂತ ಗೊತ್ತಾಯಿತು... ಈ ಏರಿಯಾದಲ್ಲಿ ಚಿರಪರಿಚಿತಳು ಅವಳು ಕೆಲಸ ಮಾಡುವ ಜಾಗ ಪತ್ತೆ ಹಚ್ಚಿ ಹೋಗಿ ಅವಳನ್ನು ವಿಚಾರಿಸಿದೆ... ಜೋರಾಗಿ ನಕ್ಕುಬಿಟ್ಟಳು.''

''ಅಂದರೆ?''

''ಮದುವೆ ಗಿದುವೆ ಏನೂ ಆಗಿಲ್ಲವಂತೆ. ನನಗೇನು ತಲೆ ಕೆಟ್ಟಿದೆಯಾ ಅವನನ್ನು ಮದುವೆ ಆಗುವುದಕ್ಕೆ? ಏನೋ ಪರಿಚಯ ಇತ್ತು. ನನ್ನ ಹತ್ತಿರ ಬಂದು ಗೋಗರೆದ... ಅಯ್ಯೋ ಅನಿಸಿತು... ನಾಟಕ ಆಡಲು ಒಪ್ಪಿಕೊಂಡೆ... ಆಡಿದೆ. ಅಷ್ಟೇ'' ಅಂದಳು ಸರ್.

'ವ್ಹಾ' ಬಲು ಘಾಟಿ ಇರಬೇಕು ಅವಳು!

''ಇನ್ನೇನು ಸರ್. ಘಾಟಿ ಅಲ್ಲದೇ? ನಾನು ವಾಪಸ್ ಹೊರಟಾಗ 'ನಿಮ್ಮ ಮೆಸ್‌ನ ಗೆಸ್ಟ್ ರೂಂ ಸೊಗಸಾಗಿತ್ತು. ಯಾವ five star ಅಲ್ಲದೇ ಇದ್ದರೂ three star ಹೋಟೆಲ್ ರೂಂಗೆ ಕಡಿಮೆ ಇಲ್ಲ. Single officer's quarters ಗೆ ಹೋಲಿಸಿದರೆ! ನಿಮ್ಮ ಕಮಾಂಡೆಂಟ್‌ಗೆ ನನ್ನ Thanks ಹೇಳಿಬಿಡಿ' ಅಂದಳು.''



''ಹುಂ, ಅಷ್ಟಗಲ, ಇಷ್ಟೆತ್ತರ ಇರುತ್ತೇರೀ, ವರ್ಲ್ಡ್ ಕಪ್ ಟ್ರೋಫಿ''



ಹೀಗಾದ್ರೆ ಹೇಗ್ರೀ ಸಮ್ಮಿಶ್ರ ಸರಕಾರ ನಡೆಸೋದು?

ನವ್ಯೋತ್ತರ ಗಾದೆಗಳು

- ವೈ.ನಾ. ಶರ್ಮ

1. ಹೋಂವರ್ಕ್ ಎಲ್ಲಿ ಅಂತ ಕೇಳಿದ್ರೆ ಮನೇಲಿದೆ 'ಮಿಸ್' ಅನ್ನೋದೆ.
2. ಹಿಂದುಳಿದಿರೋರು ಮುಂದುವರಿದ್ರೆತಾನೆ ಮುಂದುವರಿದಿರೋರು ಹಿಂದುಳಿಯೋದು.
3. ಓಟು ಹಾಕಿ ಅಂತ ಕೇಳಿದಾಗ ನೋಟು ಕೊಡಿ ಎಂದು ಪಿಸುಗುಟ್ಟಿದರಂತೆ.
4. ಬಗರ್‌ಹುಕುಂನಲ್ಲಿ ಜಮೀನ ಮಾಡ್ಕೋ, ಆಶ್ರಯ ಯೋಜನೇಲಿ ಮನೆಮಾಡ್ಕೋ.
5. ಎಂ.ಎಲ್.ಎ. ಆಗೋಕೆ ಎಂ.ಎ. ಪಾಸ್ ಮಾಡಬೇಕಾ?
6. ಯು.ಕೆ.ಜಿ.ಗೆ ಹೋಗೋ ಮಗೂನ್ನ ನೋಡಿ ಯುದ್ಧಕ್ಕೆ ಹೊರಟಿರೋ ಹಾಗೆ ಕಾಣುತ್ತೇಂತ ಅನುಮಾನಿಸಿದರು.
7. ಹತ್ತುಹೆತ್ತ ಹೆಂಗಸನ್ನೂ ಕುಟುಂಬ ಯೋಜನಾ ಚಳುವಳಿಕೆ ಕರೆದರಂತೆ.
8. ಡಾಕ್ಟರ್ ಬರವಣಿಗೆ ಓದಿ ಕಾಂಪೌಂಡರ್ ಅನ್ನಿಸಿಕೊಂಡ.
9. ಮಂತ್ರಿಯ ಮನಸ್ಸು ಓದಲು ಮನೋವಿಜ್ಞಾನಿಗೂ ಸಾಧ್ಯವಿಲ್ಲ.
10. ಡಯಟ್ ಮಾಡ್ತಿದೀನಿ ಅಂತ ಡ್ಯೂಟಿ ತಪ್ಪಿಸೋದೆ?
11. ಡೇವಿಡ್ ಡೌರಿ ಕೇಳಿದಾಗ ಡಾಟರ್ ಡೌನ್-ಡೌನ್ ಅಂದಳಂತೆ.
12. ಲೋಕಸೇವೆ ಮಾಡೋಕ್ಕೆ ಲೋಕಸಭಾ ಸದಸ್ಯನಾಗಬೇಕೆ?
13. ಹೋಯಿತಾಮಂತ್ರಿಪದವಿ ಅಂದರೆ ಸಿಕ್ಕಿತು ರಾಜ್ಯಪಾಲರ ಹುದ್ದೆ ಅಂದರು.
14. ಷಷ್ಠಿಪೂರ್ತಿ ಶಾಂತಿ ಮಾಡಿಕೊಂಡರೂ ಷೋಕಿ ಮಾಡೋದು ಬಿಡಲಿಲ್ಲ.
15. ಹದಿನೆಂಟು ವರ್ಷವಾದೋರು ಹದ್ದುಬಸ್ತಿನಲ್ಲಿರುತ್ತಾರೆಯೆ?
16. ಪವರ್‌ಕಟ್ ಏಕ್ರಿ ಅಂದರೆ ಅದು ಕೆ.ಇ.ಬಿ. ಪ್ರೊರೋಗೇಟಿವ್ ಅಂದರು.
17. ನಗರಸಭೆ ಮುಂದೆ ನಗಾರಿ ಬಾರಸಿ ನಗಪಾಟಲಿಗೆ ಈಡಾದರು.
18. ಮನೆ ಹತ್ತಿ ಉರಿಯೋವಾಗ ಮೈಕಾಯಿಸಿಕೋತೀನಿ ತಡಿ ಅಂದ.
19. ಅಣು ಸಿಡಿಸಿದ್ದು ಕೇಳಿ ಕ್ಲಿಂಟನ್ ಸಿಡಿದು ಬಿದ್ದರಂತೆ.
20. ಆಚಾರ ಬಿಟ್ಟರೂ ಆದಾಯ ಬಿಡಬಾರದು
21. ಕಿಸೆ ತುಂಬಿತೆ ಅಂದರೆ ಒಸಿ ಬಾಕಿ ಇದೆ ಅನ್ನೋದೆ?
22. 'ಕೊರವಂಜಿ' ಕಾಡಿಗೆ ಹೋದ್ರೆ 'ಅಪರಂಜಿ' ನಾಡಿಗೆ ಬರಲಿಲ್ವೆ?

ಹೃದಯ ಕಸಿ ಮಾಡಿದಾಗ....

– ಕೆ. ಚಂದ್ರಮೌಳಿ

'ಹಕ್ಕಿ ಹಾರುತಿದೆ ನೋಡಿದಿರಾ' ಅಂತ ಹಾಡ್ತಾ ಹಾಡ್ತಾ ಹಕ್ಕಿ ಹಾರಾಡ್ತಾ ಇತ್ತು - ಇಲ್ಲಿಂದ ಅಲ್ಲಿಗೆ, ಅಲ್ಲಿಂದ ಮೇಲಕ್ಕೆ, ಮೇಲಿಂದ ಮರಕ್ಕೆ, ಮರದಿಂದ ಮೋಡಕ್ಕೆ, ಮೋಡದಿಂದ ನಭೋಮಂಡಲಕ್ಕೆ. ಹೀಗೆ ಸ್ವಚ್ಛಂದವಾಗಿ ಹಾರಾಡ್ತಾ ಇರೋ ಹಕ್ಕಿಗೆ ತನ್ನ ದಿನನಿತ್ಯದ ಜಾಡು ಬಿಟ್ಟು ದೂರ ಸುತ್ತಿಬರೋ ಆಸೆಯಾಯ್ತು. 'ಅಯ್ಯೋ, ಎಲ್ಲೆಲ್ಲೋ ಅಪರಿಚಿತ ಜಾಗಕ್ಕೆಲ್ಲ ಹಾರಿಹೋದರೆ ಪ್ರಾಣಕ್ಕೆ ಏನು ಸಂಚಕಾರವೊ ಏನೋ. ಜೀವರಕ್ಷೆಗೆ ಏನಾದ್ರೂ ಮಾಡ್ಕೋಬೇಕು' ಅಂತ ಸ್ನೇಹಿತ ಪಕ್ಷಿ ಸಲಹೆ ಕೊಟ್ಟಿತು. ಈ ಹಕ್ಕಿ ಜೀವರಕ್ಷೆಗಾಗಿ (ವಿಮೆಗಾಗಿ) ವೈದ್ಯರ ಮನೆ ಅಂಗಳದಲ್ಲಿ ಇಳಿದು ಕೀಕೀ ಅಂತ ಕೂಗಿತು. ಅವರು ಬಲುಪ್ರೀತಿಯಿಂದ ಹಕ್ಕಿಯ ಮೈದಡವಿ, ರೆಕ್ಕೆ-ಪುಕ್ಕ ಬಿಡಿಸಿ ನೋಡಿ ಇದ್ದಕ್ಕಿದ್ದಂತೆ ''ಅಯ್ಯೋ, ನಿನ್ನ ರೆಕ್ಕೇಲಿ ಅರ್ಧ ಪುಕ್ಕವೆಲ್ಲಾ ಬೋಳು. ಇನ್ನರ್ಧಕ್ಕೆ ಬಲವೇ ಇಲ್ಲ. ನೀನೆಂತಾ ಹಾರ್ತೀಯಾ?'' ಎಂದು ಉದ್ಗಾರ ತೆಗೆದರು. ಕಸಿವಿಸಿಗೊಂಡ ಹಕ್ಕಿ ''ನಿಮ್ಮನೇಗೆ ನಾನೀಗ ಹಾರ್ಕೊಂಡೇ ಆಕಾಶದಿಂದ ಇಳಿದು ಬಂದೆ, ಈಗ್ಲೂ ಬೇಕಾದ್ರೆ ಹಾರ್ತೀನಿ ನೋಡಿ'' ಎಂದು ರೆಕ್ಕೆ ಬಡೀತು. ಯಾಕೋ ಪುಕ್ಕ ಒಂದಕ್ಕೊಂದು ಅಂಟಿಕೊಂಡಿದೆ ಅನಿಸಿ ಇನ್ನೂ ಜೋರಾಗಿ ರೆಕ್ಕೆ ಬಡೀತು. ವೈದ್ಯರು ಮುಸಿಮುಸಿ ನಕ್ಕಾಗ, ಅವಮಾನವಾದಂತಾಗಿ ತನ್ನ ಶಕ್ತಿಯೆಲ್ಲಾ ಬಿಟ್ಟು ರಪರಪನೆ ರೆಕ್ಕೆ ಬಡಿಯಿತು. ಈಸಲ ನೆಲ ಬಿಟ್ಟು ಹಾರಿತು. ಸಂತೋಷಕ್ಕೆ 'ಹಕ್ಕಿ ಹಾರುತಿದೆ ನೋಡಿದಿರಾ' ಎಂದು ಹಾಡಲು ಹೊರಟಾಗ ಗಂಟಲು ಕಟ್ಟಿದಂತಾಗಿ, ಮತ್ತೆ ರೆಕ್ಕೆ ಸಿಕ್ಕಿದಂತಾಗಿ, ಅಲ್ಲೇ ಮನೆಯ ಹೆಂಚಿನ ಮೇಲೆ ದೊಪ್ಪೆಂದು ಕೂತಿತು. ಅಲ್ಲಿಂದ ಎಷ್ಟೇ ರೆಕ್ಕೆ ಬಡಿದರೂ, ಹಾಡುತ್ತಾ ನಭೋಮಂಡಲ ಸೇರುವ ಹಕ್ಕಿ ಈಗ ಹುಂಜದ ತರಹ ಕೊಕ್ಕೊಕ್ಕೋ ಅಂದ್ಕೊಂಡು ಸೂರಿಗಿಂತ ಮೇಲೆ ಹಾರಲಾಗಲಿಲ್ಲ. ''ನೋಡಿದೆಯಾ? ನಾನು ಹೇಳಲಿಲ್ಲವಾ? ನೀನು ಕಸಿವಿಸಿಗೊಂಡು ಪಟಪಟಾಂತ ರೆಕ್ಕೆ ಬಡಿದರೇನು ಬಂತು? ನಿನ್ನ ಕಸಿವಿಸಿ ಸರಿಯಾಗಬೇಕೂಂದ್ರೆ ನಿನ್ನ ರೆಕ್ಕೆ ಕಸಿ ಮಾಡಬೇಕು'' ಅಂದರು ವೈದ್ಯರು. ಸರಿ, ವೈದ್ಯರ ಜಾಲದಲ್ಲಿ ಒಂದು ಸಲ ಸಿಕ್ಕರೆ ಮುಗೀತು - ಹಾಡುತ್ತಿದ್ದ ಹಕ್ಕಿ ಈಗ ಕಿರುಲಿತು, ಹಾರುತ್ತಿದ್ದ ಹಕ್ಕಿ ಈಗ ಮಂಕಾಗಿ ಹಾಗೇ ಒರಗಿತು.

ವೆಂಟಕರಾಯರ ಕವಿ ಹೃದಯ ರಪ ರಪ ಅಂದಿದ್ದನ್ನು ಕವಿ ಸಮಯದಲ್ಲೇ ಹೇಳಲು ಪ್ರಯತ್ನಮಾಡಿದೆ. ಆದರೆ ಅವರು ವೈದ್ಯರ ಜೊತೆ ನಡೆಸಿದ ಸಂಭಾಷಣೆ ಮಾತ್ರ ಹಾಗೇ ಹೇಳಬೇಕು.

ವೆಂಕಟ: ಅದು ಸರಿ ಡಾಕ್ಟ್ರೇ, ನನ್ನ ಹೃದಯ ಇಲ್ಲಿಲ್ಲವೇ ಇಲ್ಲ.

ಡಾ: ಇಲ್ದೇ ಎಲ್ಲಿ ಹೋಗುತ್ತೆ. ಸರಿಯಾಗಿ ಬಡೀತಿಲ್ಲ ಅಷ್ಟೆ.

ವೆಂಕಟ: ಅದಿದ್ರೆ ತಾನೆ ಬಡಕೊಳ್ಳುಕ್ಕೆ. ನನ್ನ ಹೆಂಡ್ತಿ ಅಲ್ಲಿ ಅಮೆರಿಕಾದಲ್ಲಿದ್ದಾಳೆ.

ಅವಳಿಲ್ಲದಾಗ ನಾನು ಇಲ್ಲಿ ಇನ್ನೇನು ಎಡವಟ್ಟು ಮಾಡಿಬಿಡ್ತೀನೋಂತ ಹೆದರಿ, ನನ್ನ ಹೃದಯಾನೂ ತನ್ನ ಜೊತೆಗೇ ತಗೊಂಡು ಹೋಗಿದ್ದಾಳೆ.

ಡಾ: ರೀ, ಏನ್ರೀ, ನಂಗೇ ಕಥೆ ಹೇಳ್ತಿರಲ್ಲಾ ನೀವು.

ವೆಂಕಟ: ಇಲ್ಲಾ ಡಾಕ್ಟ್ರೇ. ನಿಮಗೆ ಕಥೆ ಹೇಳ್ಬೇಕೂಂದ್ರೆ ಸಪ್ತಸಾಗರ, ಸಪ್ತದ್ವೀಪಗಳು, ಸಪ್ತ ಗುಹೆಗಳ ಮಧ್ಯೆ ನನ್ನ ಹೃದಯ ಇದೇಂತ - ಆ ಕಥೆ ಕೇಳಿದ್ದೀರಲ್ಲಾ?

ಡಾ: (ನನ್ನ ಕಡೆ ತಿರುಗಿ, ಪಿಸುಮಾತಿನಲ್ಲಿ) ಏನ್ರೀ, ನಿನ್ನ ಸ್ನೇಹಿತರನ್ನು ಮೊದಲು ನ್ಯೂರೋಸ್ಪೆಷಲಿಸ್ಟ್ ಕಡೆ ಕಳಿಸಿಕೊಡ್ಲೇನು? ಹೃದಕ್ಕಿಂತ ಮೊದ್ಲು ತಲೇನೂ ಕಸಿ ಆಗ್ಬೇಕೋ ಏನೋ!

ನಾನು: (ಜೋರಾಗಿ) ಡಾಕ್ಟ್ರೇ, ವೆಂಕಟರಾಯರು ಕವಿಗಳು, ಅವರ ಮಾತೂ ಕಾವ್ಯಮಯ ಅಷ್ಟೆ. ಇಲ್ಲಿನೋಡಿ ರಾಯ್ರೇ, ನಿಮ್ಮ ಹೆಂಡತೀನ ಕರೆಸಿಬಿಡಿ. ಅವರು ಬರುವಾಗ ನಿಮ್ಮ ಹೃದಯಾನೂ ತಂದುಬಿಡಲಿ....

ವೆಂಕಟ: ಕರೆಸ್ತೀನಿ. ಮೊಸಳೆ ಎಲ್ಲಿ ಹೃದಯಾನ ತಿಂದು ಹಾಕುತ್ತೋ ಅನ್ನೋ ಹೆದರಿಕೆಗೆ, ಆ ಕಪಿಯಂತೆ ಹೃದಯಾನೂ ಅಲ್ಲೇ ಅಮೆರಿಕಾದ ಸ್ಟಾಚೂ ಆಫ್ ಲಿಬರ್ಟಿ ಮೇಲೆ ಇಟ್ಟು ಬಂದು ಬಿಟ್ಟಾಳು!

ವೆಂಕಟರಾಯರು ನಕ್ಕರು. ಡಾಕ್ಟರು ಮಾತ್ರ ''ನಿಮ್ಮ ಕಪಿ ಮಹಾಶಯರನ್ನ ನೋಡ್ಕಳ್ಳಿ'' ಅಂತ ಗುರ್ ಅಂದ್ಕೊಂಡೇ ಹೋದರು. ಹೃದಯ ಕಸಿ ಮಾಡಿ ಜೀವದಾನ ಮಾಡುವ ಡಾಕ್ಟರನ್ನು 'ಹೃದಯ ತಿನ್ನುವ ಮೊಸಳೆ' ಅಂದರೆ ಯಾರು ತಾನೇ 'ಗುರ್' ಅನ್ನಲ್ಲ!

ವೆಂಕಟರಾಯರಿಗೇ ಎಲ್ಲಾ ಕೆಲಸಾನೂ ಬಿಟ್ಟರೆ ಇನ್ನೇನೇನು ಅಧ್ವಾನ ಮಾಡಿಬಿಡ್ತಾರೋ ಎಂದು ''ರಾಯ್ರೇ, ನೀವು ಹೆಂಡತೀಗೆ ಏನೂ ಹೇಳಲು ಹೋಗಬೇಡಿ. ನಾನೇ ಎಲ್ಲಾ ವಿವರಿಸಿ ನಿಮ್ಮ ಹೆಸರಲ್ಲಿ ಇ-ಮೇಲ್ ಕಳಿಸಿಬಿಡ್ತೀನಿ. ನೀವು ಮಾತ್ರ ಕವಿತೆ ಓದ್ಕೊಂಡೋ ಬರ್ಕೊಂಡೋ ಹಾಯಾಗಿರಿ'' ಅಂತಂದೆ. 'ಕೆಲಸ ಜಾಸ್ತಿ ಆದ್ದರಿಂದ, ಕೊಟ್ಟ ರಜಾನೂ ವಜಾ ಮಾಡಿದ್ದಾರೆ. ನಾನೀಗ ಹಾಕುಕ್ಕಾಗ್ತಾ ಇಲ್ಲ. ನೀನೇ ಬೇಗ ಬಂದುಬಿಡು' ಅಂತ ಬರೆದಿದ್ದ ಇ-ಮೇಲ್‌ನ ರಾಯರಿಗೆ ತೋರಿಸಿದೆ. ನನ್ನ ಬರಡು ಸುದ್ದಿಯನ್ನ ರಸಮಯ ಮಾಡುವಂತೆ ''ಪ್ರಿಯ ರಾಧಿಕಾ.... ನೀ ಬರಬೇಕಾದ್ರೆ ನಾ ಹೇಳಿದ್ದನ್ನು ಮರೀದೇ ತಗೊಂಡು ಬಾ'' ಅಂತ ತಾವೇ ಎರಡು ಸಾಲು ಸೇರಿಸಿದರು. ''ರಾಧಿಕಾ ತೂನೇ ಬನ್ಸುರೀ ಚುರಾಯಿ' ಅನ್ನುವಂತೆ ಆ ರಾಧಿಕಾ ಇಲ್ದೆ ಈ ಕವಿಗೆ ಕೊಳಲೂ ಇಲ್ಲ, ಕೊಳಲ ಗಾನವೂ ಇಲ್ಲ. ಇ-ಮೇಲ್ ಹೋದ ತಕ್ಷಣ ಫೋನ್ ಬಂತು. ಫೋನಿನಲ್ಲಿ ಇವರಿಬ್ಬರ ಆಲಾಪ-ಪ್ರಲಾಪ ಕೇಳಿ ಇವರೀಗ ತಾತ-ಅಜ್ಜಿ ಆಗಿದ್ದಾರಾ ಅನ್ನುವ ಅನುಮಾನ ಬರುವಂತಿತ್ತು. 'ಅದು ಹಾಗೇ ಕಣಯ್ಯ! ಎಪ್ಪತ್ತೈದು ವರ್ಷದ ಪ್ರೀತಿ ಕಳಿತ ಉಪ್ಪಿನಕಾಯಿ ತರಹ. ಇಲ್ಲಾಂದ್ರೆ ಹಳೇ ವಿಸ್ಕಿಯ ತರಹ ರುಚಿ ಜಾಸ್ತಿ''

ಅಂದರು. ವೆಂಕಟರಾಯ್ರೇ, ಕಪಿಗಳೇ! ಅಂತ ಮನಸ್ಸಿನಲ್ಲೇ ಉದ್ಗಾರ ತೆಗೆದು ಮನೆಗೆ ಹೋದೆ.

ರಾಧಿಕಾ ಅಮೆರಿಕಾದಿಂದ ಹಿಂದಿರುಗಿ ಅಲ್ಲಿಯ ಕಥೆ ಹೇಳುವ ಹುಮ್ಮಸ್ಸಿನಲ್ಲಿರುವಾಗಲೇ ಈ ಪ್ರಾಣಿ ತನ್ನ ಹೃದಯ ಕಸಿಮಾಡುವ ವಿಚಾರ ಬಾಯಿಬಿಡುತ್ತೋ ಅಂತ ನನಗೆ ಹೆದರಿಕೆ. ಈ ಅಧ್ವಾನ ತಪ್ಪಿಸಲು ನನ್ನ ಜೊತೆಗೆ ನನ್ನಾಗಿ, ಬಂಧು-ಬಳಗ ಎಲ್ಲರನ್ನೂ ಕರೆದುಕೊಂಡು ರಾಧಿಕಾಳನ್ನು ಸ್ವಾಗತಿಸಲು ಏರ್‌ಪೋರ್ಟ್‌ಗೆ ಹೋಗಿ, ಅವರೊಡನೆಯೇ ಮನೆಗೆ ಬಂದು ಹರಟುತ್ತಾ ಕೂತೆವು. ಇವರಿಗಿನ್ನೇನು ಕೆಲಸ, ನಮ್ಮ ನಮ್ಮನ್ನೇ ಸುಮ್ಮನೇ ಬಿಡಬಾರದೆ ಅನ್ನುವ ಯೋಚನೆ ರಾಯರಿಗೂ-ರಾಧಿಕಾಗೂ ಹತ್ತುಸಲ ಬಂದಿರಬೇಕು. ಅವರೇನಾದ್ರೂ ಅಂದುಕೊಳ್ಳಲೀಂತ ಅಮೆರಿಕಾದ ಕಥೆ ಕೇಳ್ತ ಕೇಳ್ತಾ ಅಲ್ಲೇ ಕೂತೆವು. ಮಧ್ಯೆ ಮಧ್ಯೆ ನಾಲ್ಕಾರು ಸಾರಿ ವೆಂಟರಾಯತು ''ಅಲ್ಲಾ ಕಣೇ... ನಾ ಹೇಳಿದ್ದನ್ನ ತಂದೆಯೇನೇ ರಾಧಿಕಾ?'' ಅಂತ ಕೇಳಿದಾಗಲೆಲ್ಲಾ ರಾಧಿಕಾ ''ಈಗಲೇ ಸೂಟ್‌ಕೇಸ್ ಯಾರು ತೆಗೀತಾರೇ... ನಾಳೆ ತೆಗೆದರಾಯಿತು. ಯಾಕಿಷ್ಟು ಅವಸರ' ಎಂದು ಕಣ್ಸನ್ನೆಯಲ್ಲೇ ರಾಯರನ್ನು ಗದರಿಕೊಂಡರು.

ರಾಯರ ಪ್ರಶ್ನೆಯಿಂದ ಅಲ್ಲಿದ್ದ ಆರು ಜನರಿಗೆ ಆರು ಯೋಚನೆಗಳು. ಈ ವಯಸ್ಸಿನಲ್ಲೂ ಏನೋ ವಿಶೇಷವಾದ್ದನ್ನು ಅಮೆರಿಕಾದಿಂದ ತರಿಸಿದ್ದಾರೆ, ಅದರ ಬಗ್ಗೆ ದಂಪತಿಗಳು ಗುಟ್ಟು-ಗುಟ್ಟಿನಲ್ಲೇ ಏನೋ ಮಾಡ್ತಾ ಇದ್ದಾರೆ ಅಂತ ಎಲ್ಲರಿಗೂ ಆಶ್ಚರ್ಯ. ಅಪ್ಪನ ಬಕ್ಕ ತಲೆಗೆ ಟೋಫನ್ ತರಲು ಹೇಳಿದ್ದಾರೇಂತ ರಾಯರ ಎರಡನೇ ಮಗಳ ಊಹೆ. ಕವಿಗಳು ಅಮೆರಿಕಾದ ವಾಲ್ಟ್‌ವಿಟ್‌ಮನ್ನೋ ಇನ್ನಾರೋ ಕವಿಯ ಪುಸ್ತಕ ತರಲು ಹೇಳಿರಬೇಕೆಂದು ರಾಜನ ಊಹೆ. ''ಸರಿ, ನೀವೂ ಬಿಡಿ, ಎಲ್ಲಾ ಬಿಟ್ಟು ಕವಿಯ ಪುಸ್ತಕ ತರಿಸ್ತಾರೇನ್ರಿ! ಏನೋ ಕ್ರೀಮೋ, ತಲೆಗೆ ಬಣ್ಣಾನೋ, ಶೋಕಿಲಾಲನ ಬಟ್ಟೆನೋ ಹೇಳಿರ್ತಾರೆ'' ಅಂತ ರಾಜನ ಹೆಂಡತಿ. ''ರ್‍ರೀ! ಅದೆಲ್ಲಾ ಏನಾದ್ರೂ ಆಗಿದ್ರೆ ಇಷ್ಟೊಂದು ಗುಟ್ಯಾಕೆ? ಈ ಬಕ್ಕ ತಲೆಯವರೆಲ್ಲಾ ಸೆಕ್ಸಿ ಅಂತೆ. ಆದ್ದರಿಂದ ಗುಟ್ಟಾಗಿ ಪ್ಲೇಬಾಯ್ ಪತ್ರಿಕೇನೋ, ಬ್ಲೂ ಫಿಲ್ಮೋಲ್ಮೋ ತರಿಸಿಕೊಂಡಿರಬೇಕು'' ಎಂದಳು ಪೋಲೀ ಕಿಟ್ಟಿಯ ಹೆಂಡತಿ. ಅವಳೇ ಹಾಗೆಂದ ಮೇಲೆ ಇನ್ನು ಪೋಲಿಕಿಟ್ಟಿ ಸುಮ್ಮನಿರುತ್ತಾನೆಯೇ? ಎಲ್ಲರ ತಲೆಮೇಲೂ ಹೊಡೆದ ಹಾಗೆ ''ಛಿ ಛಿ ಛೀ! ನೀವೆಲ್ಲಾ ಏನೋ ಗೊಡ್ಡು ಕಂತೆ ಪುರಾಣ ಹೇಳ್ತಿದ್ದೀರಲ್ಲಾ! ಈ ಮುದಿ ವೆಂಕಟರಾಯ ಹೊಸದಾಗಿ ಬಂದಿದೆಯಲ್ಲ ವಿಯಾಗ್ರ..... ಆ್ಞ! ಅದನ್ನೇ ತರಿಸಿರಬೇಕು....'' ಎಂದ. ಅಲ್ಲಿಯವರೆಗೂ ನಾವು ನಾವೇ ಗುಸಗುಸಾಂತ ಮಾತಾಡುತ್ತಿದ್ದವರು, ತಟಕ್ಕನೆ ಬಾಂಬ್ ಸಿಡಿದಂತೆ ನಡುಗಿ ಮೈಕೊಡವುತ್ತಾ ಎದ್ದೆವು. ವೆಂಕಟರಾಯರಿಗೆ ಎಲ್ಲಿಯ ಜೆಟ್‌ಲಾಗ್? ಅವರು ಕೂತಲ್ಲೇ ಗೊರಕೆ ಹೊಡೆಯುತ್ತಿದ್ದರು. ನಾವೆಲ್ಲಾ ಗುಡ್‌ನೈಟ್ ಹೇಳಿ ಹೊರಟಾಗ ಶೇಷ ಪ್ರಶ್ನೆ ಉಳಿದೇ ಇತ್ತು - ಈ ರಾಯ ಅಷ್ಟು ಗುಟ್ಟಾಗಿ ಅಮೆರಿಕಾದಿಂದ ಏನು ತರಿಸಿಕೊಂಡ ಅಂತ.

ಹೃದಯ ಕಸಿ ಮಾಡ್ಬೇಕೂಂತ ಎಲ್ಲಾ ತಯಾರಿ ನಡೆದಿತ್ತು. ಎಲ್ಲರಿಗೂ ಒಳಗೊಳಗೇ

ತಳಮಳ. ರಾಯರು ಮಾತ್ರ ಧೈರ್ಯವಾಗೇ ಇದ್ದರು. ''ಇಷ್ಟು ಬೇಗ ನನಗೆ ಮೇಲಿಂದ ಕರೆ ಬಂದಿಲ್ಲ, ನಂಗೆ ಏನೂ ಆಗುಲ್ಲ'' ಅಂದಾಗ ರಾಧಿಕಾಗೂ ಧೈರ್ಯ. ಆದರೆ ಮರುಗಳಿಗೆಯೇ ''ಎಲ್ಲಾ ಸರಿಯಾಯ್ತೂಂದ್ರೆ ಕಣ್ಣು ಮಿಟಿಕಿಸಿ ಬೈಪಾಸ್, ಇಲ್ಲಾಂದ್ರೆ ಕಣ್ಮುಚ್ಚಿ ಬೈ ಬೈ'' ಅಂದಾಗ ಮೋಡ, ಮಳೆ - ''ಆಪರೇಷನ್‌ಗೆ ಹೊಗ್ತೀನಿ. ನಾಳೆ ಕಣ್ಣುಬಿಟ್ಟರೆ ಎಲ್ಲಾ ಸರೀಂತ. ಇಲ್ಲದಿದ್ರೆ ನನಗೇನೂ ಗೊತ್ತೇ ಆಗುಲ್ಲ'' ಅಂದಾಗ ರಾಧಿಕಾ-ಮಗಳು ಇಬ್ಬರೂ ಗೋಳೋ ಅಂತ ಅಳಲು ಶುರುಮಾಡಿದರು.

ಕೊನೆಗೆ ಎಲ್ಲಾ ಸಾಂಗೋಪಾಂಗವಾಗಿ ಆಯ್ತು. ಡಾಕ್ಟರು ಹೊರಬಂದು ನಗುತ್ತಾ ''ಇನ್ನು ನಿಮ್ಮ ಕವಿಗಳಿಗೆ ಹದಿನೈದು ವರ್ಷ ವಯಸ್ಸು ಕಡಿಮೆ ಆದಹಾಗೆ'' ಅಂದರು. ನನ್ನ ಕಡೆ ತಿರುಗಿ ಮೆಲ್ಲಗೆ ''ಇವರ ಕವಿ ಹೃದಯದಲ್ಲಿದ್ದ ಒಂದು ಕೊಂಕು ಸರಿಮಾಡಿದ್ದೀನಿ. ನೋಡಿ, ಅವರ ಹೃದಯ ಕಸಿವಿಸಿಯಾಗಿತ್ತು. ಈಗ ಕಸಿಮಾಡಿದ್ದೀನಿ. ಅದು 'ಕಹಿ' ಆಗುತ್ತೋ, ಬರೀ 'ಸೀ' ಆಗುತ್ತೋ ಕಾದು ನೋಡಬೇಕು'' ಎಂದು ತಮ್ಮ ಜೋಕಿಗೆ ತಾವೇ ನಕ್ಕರು. ಪೋಲೀ ಕಿಟ್ಟಿ ಕೇಳಿದಾಗ ''ನಿಮ್ಮ ಕವಿಗಳು ಕಪಿಗಳ ತರಹ ಚಂಗನೆ ಹಾರಾಡಬಹುದು ಅಂದ್ರೆ ಅವಮಾನ ಮಾಡಿದ ಹಾಗೆ. ಒಳ್ಳೇ ನಂದೀ, ನಂದೀವಾಹನ ಇದ್ದ ಹಾಕಿರಬಹುದು'' ಎಂದು ನಗುತ್ತಾ ಡಾಕ್ಟರು ಹೊರಟರು. ''ನಾ ಮೊದ್ಲೇ ಹೇಳ್ಲಿಲ್ಲವಾ? ಸ್ಟಡ್‌ಬುಲ್... ಜೊತೆಗೆ ವಿಯಾಗ್ರ ಬೇರೆ...'' ಎಂದು ಪೋಲೀಕಿಟ್ಟಿ ಶುರುಮಾಡಿದಾಗ ಅವನ ಬಾಯಿ ಮುಚ್ಚಿಸಿದೆ.

ಈಗ ವೆಂಕಟರಾಯರು ಮನೆಗೆ ಬಂದಮೇಲೆ ಅವರ ಚಟುವಟಿಕೆ - ಬದಲಾವಣೆಗಳನ್ನೇ ಕಾಯ್ತಾ ಇರೋರು ಇಬ್ಬರೇ - ಅವರ ಪ್ರಿಯ ರಾಧಿಕಾ ಮತ್ತು ನಾನು. ''ಹದಿನೈದು ವರ್ಷ ಕಡಿಮೆ ಆದದ್ದು ಸಂತೋಷಾನೇ! ಅಂದ್ರೆ ಅವರ ವಯಸ್ಸು, ಈಗ ನಲವತ್ತರ ಬಡ್ಡೆಗೆ ಬಂದ ಹಾಗೇನೇ. ನಲವತ್ತೆಂದರೆ ಯಾಕೊ ಮೈಚಳಕು ಬರುತ್ತೇರಿ. ನಲವತ್ತು ನಾಟೀ-ತುಂಟ ನಲವತ್ತು. ತುಂಬಾ ತುಂಟತನದ ವಯಸ್ಸು. ನಲವತ್ತರ ನಲಗು ಬಂದಾಗ ಹೆಂಡತಿ ಬಿಟ್ಟು ಮಿಕ್ಕೆಲ್ಲರೂ ಮೇನಕೆಯರು. ಆ ಅಪ್ಸರಾ ಲೋಕದಿಂದ ಇವರನ್ನು ಹಿಡಿದು ಭೂಲೋಕಕ್ಕೆ ತರಬೇಕಾದ್ರೆ ನನಗೆ ಪೂರ್ತಿ ಹತ್ತು ವರ್ಷ ಹಿಡಿತು.... ಜೀವನದಲ್ಲಿ ಒಂದು ಸಲ ನಲವತ್ತರ ನಲಗು ಬಂದರೆ ಪರವಾಗಿಲ್ಲಾರೀ, ಹೇಗೋ ನಿಭಾಯಿಸಬಹುದು. ಎರಡೆರಡು ಸಲ ವಕ್ಕರಿಸಿಕೊಂಡ್ರೆ, ಬರಗಾಲದಲ್ಲಿ ಅಧಿಕಮಾಸ ಬಂದ ಹಾಗೆ, ಯಾರಿಗೆ ತಡೆಯುಕ್ಕಾಗುತ್ತೇಂತ ನನಗೆ ಚಿಂತೆ ಆಗ್ತಾ ಇದೆ....'' ರಾಧಿಕಾ ಹೇಳಿದ್ದರಲ್ಲಿ ತಪ್ಪೇನೂ ಕಾಣಲಿಲ್ಲ. ಆದರೆ ನನ್ನ ಚಿಂತೆಯೇ ಬೇರೆ. ಈ ರಾಯರು ಹೃದಯ 'ಕಸಿ' ಮಾಡಿಸಿಕೊಂಡ ಮೇಲೆ 'ಕವಿ' ಯಾಗ್ತಾರೋ, 'ಕಪಿ' ಯಾಗ್ತಾರೋ, 'ಕಹಿ' ಯಾಗ್ತಾರೋ, ಅಥವಾ ಬರೀ 'ಸೀ' ಆಗ್ತಾರೋ ಅಂತ ನನ್ನ ಚಿಂತೆ.

ಏನೇ ಬರಲಿ, ಏನೇ ಹೋಗಲಿ, ಕಸಿಯಾದಾಗ ಹಣ್ಣೆಲೆ ಚಿಗುರಲಿ, ಸಸಿಯಾಗಿರಲಿ, ಕಸಿವಿಸಿಯಾಗದಿರಲಿ, ಹಕ್ಕಿ ಹಾರುತಿರಲಿ ಅಂತ ನನ್ನ ಪ್ರಾರ್ಥನೆ!



ಮುಖ ನೋಡಿದ್ರೆ ಶೀರ್ಷಿಕೆ ಬೇಡ ಅಲ್ವೇ !

ಸೇವಕತನದ ರುಚಿ

- ಎಂ.ಎಸ್.ಕೆ.

''ಸೇವಕತನದ ರುಚಿ ಏನರಿದ್ಯೋ ಹನುಮ'' ಅಂತ ಮರುಗಿದರು ಪುರಂದರ ದಾಸರು.

ನೀನು ಲಂಕೆಗೆ ಹೋಗಿ ಸೀತೆಯ ಯೋಗಕ್ಷೇಮ ತಂದಾಗ 'ರಾಮಭದ್ರ ನಂಗೊಂದು ಮದುವೆ ಮಾಡಿಸು' ಅಂತ ಕೇಳಿದ್ದರೆ ಅವನು ಸಂತೋಷದಿಂದ ಕಿಷ್ಕಿಂದೆಯಿಂದ ಕನ್ಯಾಮಣಿ ಗಳನ್ನು ಕರಿಸಿ ನಿನಗೆ ಕಲ್ಯಾಣ ಮಾಡಿಸುತ್ತಿರಲಿಲ್ಲವೇ?

ರಣರಂಗದಲ್ಲಿ ಇಂದ್ರಜಿತುವಿನ ಪೆಟ್ಟಿಗೆ ತತ್ತರಿಸಿ ಬಿದ್ದಿದ್ದ ಲಕ್ಷ್ಮಣನನ್ನು ಎಬ್ಬಿಸಲು ನೀನು ಸಂಜೀವಿನ ಪರ್ವತವನ್ನು ಅನಾಮತ್ ಎತ್ತಿ ತಂದಾಗ ಸ್ವಲ್ಪ ತಲೆಕೆರೆದುಕೊಳ್ಳುತ್ತಾ ''ಪ್ರಭೂ ನಂಗೊಂದು ರಾಜ್ಯ...'' ಅಂದಿದ್ದರೆ ಇಲ್ಲಾ ಎನ್ನುತ್ತಿದ್ದನೆ? ಇದೆಲ್ಲಾ ಬಿಟ್ಟು ಬೆತ್ತಲೇ ಸನ್ಯಾಸಿಗಳ ತರಹ ''ನಿನ್ನ ಸೇವಕನನ್ನಾಗಿ ಮಾಡಿಕೋ ಅಂದೆಯೆಲ್ಲೋ'' ಅನ್ನುತ್ತಾ ತಲೆ ಚಚ್ಚಿಕೊಂಡರು ದಾಸರು. ''ಹೇಗಿದ್ದರೂ ನೀನು ಚಿರಂಜೀವಿ. ನೀನು ಮದುವೆಯಾಗುವವರು ಖಂಡಿತ ಚಿರಂಜೀವಿಗಳಲ್ಲ. ಮೇಲಿಂದ ಮೇಲೆ ಒಂದಾದ ಮೇಲೊಂದು ಮದುವೆಗಳನ್ನು ಮಾಡಿಕೊಳ್ಳುತ್ತಾ ಹಾಯಾಗಿ ರಾಜ್ಯಭಾರ ಮಾಡುತ್ತಾ ಇರಬಾರದಿತ್ತೇನೋ ಹನುಮಾ. ಎಂಥಾ ಅವಕಾಶ ಕಳೆದುಕೊಂಡೆಯಲ್ಲೋ. ಈ ಶ್ರೀರಾಮ ಸೇವಕತನದಲ್ಲಿ ಅದೇನು ಸಿಹಿ ಕಂಡೆಯೋ ಮಾರುತೀ'' ಅನ್ನುತ್ತಾ ಮುಮ್ಮಲ ಮರುಗಿದರು ದಾಸರು.

ಈ ದಾಸರಿಗೆ ನಮ್ಮ ಮಾರುತಿಗಿದ್ದ ಮುಂದಾಲೋಚನೆ ಯೆಲ್ಲಿಂದ ಬರಬೇಕು? ಮುಂದೆ ಶ್ರೀರಾಮ ರಾಜ್ಯ, ಶ್ರೀ ಕೃಷ್ಣ ರಾಜ್ಯ, ನವಾಬೀ ರಾಜ್ಯ, ಬ್ರಿಟಿಷ್ ರಾಜ್ಯ ಇವೆಲ್ಲ ಮುಗಿದನಂತರ ಗಾಂಧೀ ರಾಜ್ಯ ಬಂದು ಆಳು ಅರಸನಾಗುತ್ತಾನೆ. ಅರಸು ಆಳಾಗುತ್ತಾನೆ ಎನ್ನುವ ಜ್ಞಾನ ನಮ್ಮ ಮಾರುತಿಗಲ್ಲದೆ ಮತ್ತಾರಿಗೆ ಬರಬೇಕು. ಕೇವಲ ತಮ್ಮ ಎಂಭತ್ತನೇ ವಯುಸ್ಸಿನಲ್ಲೇ ತಮ್ಮ ಅವತಾರವನ್ನು ಮುಗಿಸಿದ ದಾಸರಿಗೇನುಗೊತ್ತಿತ್ತು?

ತಮ್ಮ ಹನುಮನಿಗೆ ಮುಂಬರುವ ಸ್ತ್ರೀ ಸಂರಕ್ಷಣ ಕಾನೂನಿನ ಅರಿವೂ ಇತ್ತು. ತಾನು ಮದುವೆಯಾದ ಅನೇಕ ಹೆಂಡತಿಯರ ಪುತ್ರ ಪೌತ್ರ, ಪ್ರಪೌತ್ರ ಇತ್ಯಾದೀ ಸಂತಾನಗಳು ''ಹನುಮಜ್ಜ ಎಲ್ಲಿ ನನ್ನ ಪಾಲಿನ ಆಸ್ತಿ?'' ಅಂತ ಕೇಳಿ ತನ್ನನ್ನು ಕೋರ್ಟು ಕಛೇರಿಗಳಿಗೆ ಎಳೆದು ಪಾಟೀಸವಾಲಿನಲ್ಲಿ ''ರೀ ಅಜ್ಜಯ್ಯ ನಿಮಗೆ ಒಟ್ಟು ಎಷ್ಟು ಮದುವೆಗಳಾದುವು. ಹುಟ್ಟಿದ ಮಕ್ಕಳೆಷ್ಟು?'' ಎಂದು ಕೇಳಿ ಎಲ್ಲರೂ ಘೊಳ್ಳೆಂದು ನಕ್ಕು ಇವನ ಮಾನ ಮೂರಾಬಟ್ಟೆ ಮಾಡುವುದು ಖಚಿತ ಎನ್ನುವ ಅಪರೋಕ್ಷ ಜ್ಞಾನ ಚೆನ್ನಾಗಿತ್ತು. ಈ ದಾಸರೇನೋ ನನ್ನನ್ನು ಹುರಿದುಂಬಿಸಿ ಮದುವೆ ಮಾಡಿಸಿ ತಾವು ಸ್ವರ್ಗದಲ್ಲಿ ಹಾಯಾಗಿ ತಂಬೂರಿ ಮೀಟುತ್ತಾ ತಿರುಗುತ್ತಿರುತ್ತಾರೆ. ಮುಂಬರುವ ಪೀಕಟಾಲFace ಮಾಡೋನು ಯಾರು ಎನ್ನುತ್ತಾ ಅವನು ''ಈ ಮದುವೀನೂ ಬ್ಯಾಡ.

ಮಕ್ಕಳೂ ಬ್ಯಾಡ. ಮುಂದಿನ ಪಿರಿ ಪಿರೀಗಳೂ ಬ್ಯಾಡಾಂತ'' ತೆಪ್ಪಗೆ ಹಿಮವತ್ಪರ್ವತಕ್ಕೆ ಹೋಗಿ ಜಪ ಮಾಡುತ್ತಾ ಧಿಂಮ್ಮಂತ ಕೂತುಬಿಟ್ಟ.

ಹಿಂದಿನ ಕಾಲದಲ್ಲಿ ಎಲ್ಲಾ ಸರ್ಕಾರೀ ನೌಕರರೂ ತಮ್ಮ ಕಾಗದ ಪತ್ರಗಳನ್ನು ಮುಗಿಸುವಾಗ "I beg to remain sir, your most obedient servant" ಅನ್ನುತ್ತಾ ಮುಕ್ತಾಯಗೊಳಿಸಬೇಕಾಗಿತ್ತು. ಇದರ ಉದ್ದೇಶ ಆ ಸರ್ಕಾರೀ ನೌಕರ ತಾನು ಪ್ರಜೆಗಳ ಸೇವಕ ಎನ್ನುವುದನ್ನು ಪದೇ ಪದೇ ಜ್ಞಾಪಿಸಿಕೊಳ್ಳುತ್ತಿರಲಿ ಎಂದಿರಬಹುದು. ಅಂದಿನ ತಾಪೇದಾರಿ ಮಾಡುವವನು ತಾನು ಸದಾ ಕಾಲ ತನ್ನ ಒಡೆಯನ ಸೇವಾತತ್ಪರನಾಗಿರಬೇಕು, ಮೊದಲು ತನ್ನ ಒಡೆಯನ ಸೇವೆ ಆಮೇಲೆ ಅವನ ಹೆಂಡತಿ ಮಕ್ಕಳು ಸಂಸಾರ ಇತ್ಯಾದಿ ಅನ್ನುವ ತತ್ವ ಅವನಿಗೆ ನಾಟಿತ್ತು.

ಇಂದಿನ ಪರಿಯೇ ಬೇರೆ. ಇಂದಿನ ಫಿಲಾಸಫಿ "I wish to remain your most disobedient assistant" ಎನ್ನುವುದು. ಇಂದಿನ ಸರ್ಕಾರಿ ಮತ್ತು ಇತರೆ ಸಂಘ ಸಂಸ್ಥೆಗಳಲ್ಲಿ ""Lowest the grade highest the safety, irresponsibility and ನೆಮ್ಮದಿ" ಅನ್ನೋದು ಖಂಡಿತ.

Fools build houses, open offices and factories for wise to join and enjoy. Share and expliot all gains. Deflect all pains back to the employer ಅನ್ನೋದು 100% ನಿಜ.

ಐದನೇ ಹೆನ್ರಿ ದೊರೆ ಅಜಾನ್ ಕೊ ರಣ ಭೂಮಿಯಲ್ಲಿ ಯುದ್ಧದ ಹಿಂದಿನ ರಾತ್ರಿ ವೇಷಧರಿಸಿ ತನ್ನ ಯೋಧರನ್ನು ಭೇಟಿ ಮಾಡಿದಾಗ ಅವರೆಲ್ಲಾ ಹೇಳಿದ್ದು ''ನಾವೆಲ್ಲಾ ಇಲ್ಲಿ ಬಂದಿರೋದು ನಮ್ಮ ಕೀರ್ತಿಗಾಗಿ. ಧನ ಧಾನ್ಯ ಲೂಟಿಗಾಗಿ. ಯುದ್ಧದ ಗೆಲುವು ಮತ್ತು ಸೋಲು ನಮ್ಮ ರಾಜಯ ತಲೇನೋವು. ನಮಗೂ ಅದಕ್ಕೂ ಸಂಬಂಧವಿಲ್ಲ'' ಅಂದುಬಿಟ್ಟರು. ಇದೇ ಸೇವಕತನದ ರುಚಿ.

ನಾನೊಂದು ಸಲ ತುರ್ತು ಸಾಲಕ್ಕೋಸ್ಕರ ಅರ್ಜಿ ಹಾಕಿದ್ದೆ. ಆ ಆಫೀಸಿನ ಅಧಿಕಾರಿಯನ್ನು ಭೇಟಿ ಮಾಡಿದಾಗ ''ನಿಮ್ಮ ಅರ್ಜಿ ನನ್ನ ಟೇಬಲ್ಲಿಗೆ ಬಂದಿಲ್ಲಾ'' ಅಂದರು. ನಾನು ಆ ಅರ್ಜಿಯನ್ನು ಪತ್ತೆಮಾಡಿ ಅಲ್ಲೇ ಸ್ಟೂಲಿಮೇಲೆ ಒಂದು ಕಾಲು ಸ್ಟೂಲಿನಮೇಲೂ, ಇನ್ನೊಂದು ಕೆಳಗೂ ಬಿಟ್ಟು ಬೀಡೀ ಸೇದುತ್ತ ಕೂತಿದ್ದ 'ಸೇವಕ' ನನ್ನು ಆ ಫೈಲ್ ಮೂ ಮಾಡಲು ಕೇಳಿಕೊಂಡೆ. ''ನನ್ನ ಇವತ್ತಿನ ಕೋಟಾ ಮುಗೀತು. ನಾಳಿಕ್ ನೋಡಾಣ'' ಅಂದ. ನಾನು ''ಇನ್ನೂ ನಾಲ್ಕು ಘಂಟೇನೂ ಆಗಿಲ್ಲ. ಇನ್ನು ಟೈಂ ಇದೆಯಲ್ಲಾ'' ಅಂದುಬಿಟ್ಟೆ. ಅವನು ಕೆರಳಿ ''ಆ ಆಫೀಸರ್ ನಿಮಗೆ ಹೇಳಿಕೊಟ್ಟಿರಬೇಕು. ಮಾಡ್ತೀನಿ ತಡೀರಿ ಅವನಿಗೆ'' ಎನ್ನುತ್ತಾ ಬೀಡಿಯನ್ನು ಹೊಸಿಕಿ, ಚಪ್ಪಲಿ ಮೆಟ್ಟಿ ಆಫೀಸರ್ ಬಳಿ ಧಾವಿಸಿದ.

ಮುಂದೇನಾಯಿತೋ ನಂಗೊತ್ತಿಲ್ಲಾ. ಆ ಆಫೀಸರ್ ಆ ನೌಕರನ ಮೇಲೆ ಕಂಪ್ಲೈಂಟ್ ಕೊಟ್ಟಿದ್ದರೆ ಅಲ್ಲಿನ HRD (ಮಾನವ ಸಂಪನ್ಮೂಲ ಅಭಿವೃದ್ಧಿ

ಇಲಾಖೆ)ಯವರು ಆ ಆಫೀಸರ್ಗೆ "ರೀ ನಿಮಗೆ tact ಸಾಲದೂ ರೀ. ಕೆಲಸಗಾರರ ಹತ್ತಿರ ನೈಸಾಗಿ ಕೆಲಸ ತೆಗೀಬೇಕ್ರಿ. ಅವರನ್ನ ಸರಿಯಾಗಿ ಅರ್ಥಮಾಡಿಕೊಂಡು ಅವರ ಬೇಕೂ ಬೇಡಗಳನ್ನ ಗ್ರಹಿಸಬೇಕ್ರಿ. ನಿಮ್ಮ ಮಾತು ಕೇಳ್ಕೊಂಡು ನಾವುAction ತಗೊಂಡ್ರೆ ಮುಂದೆ ಆಗೋ ಗಲಾಟೆಗಳಿಗೆ ಯಾರ್ರೀ ಜವಾಬ್ದಾರಿ. ನಿಮಗೆ ಕೊಟ್ಟ ಟ್ರೈನಿಂಗ್ ಎಲ್ಲಾ ವೇಸ್ಟ್ ಆಯಿತು. ಹೋಗ್ರೀ. ಇನ್ನು ಮುಂದೆಯಾದ್ರೂ ಈಥರ ಸಿಚುಯೇಶನ್ ಬರದ ಹಾಗೆ ನೋಡ್ಕೊಳ್ರಿ" ಅಂತ ಅಡ್ವೈಸಿಸಿ ಅವನನ್ನ ಕಳಿಸೋದು ಖಂಡಿತ.

ಇಷ್ಟೆಲ್ಲಾ ಮುಂದಾಲೋಚನೆಯಿಂದಲ್ಲವೇ ನಮ್ಮ ಚಾಣಾಕ್ಷ, ಚಾಲೂಕು ಹನುಮ ಬರೀ "ಸೇವಕತನದ ರುಚಿ" ಕಂಡು ಸಕಲ ಜವಾಬ್ದಾರೀನೂ ಆ ಸೀತಾ ಪತಿಯ ಮೇಲೆ ಹೊರಿಸಿ ತಾನು ಬಾಳೇಹಣ್ಣು ಮತ್ತು ಕಡಲೇಕಾಯಿ ಫಲಾಹಾರ ಮಾಡಿಕೊಂಡು ಹಾಯಾಗಿ ಇರೋದು ಹಿಮಾಲಯಾಸ್ ಅಲ್ಲಿ?

ಧ್ಯಾನ

ಜೇಡನಿಗೆ
ಗೂಡಿನ ಧ್ಯಾನ
ಬಕನಿಗೆ
ಮಿಕದ ಧ್ಯಾನ
ಚಿಟ್ಟೆಯಾಗುವ ಧ್ಯಾನ
ಇವಕ್ಕಿಂತ ಭಿನ್ನ

ಕಂಬಳಿಯ ಹುಳ
ಚಿಟ್ಟೆಯಾಗುವುದು
ತದೇಕ ಧ್ಯಾನದಿಂದ
ಧ್ಯಾನದಲಿ
ತಾನಿಲ್ಲ, ಗೂಡಿಲ್ಲ.

ಚಂದ ಸ್ವಚ್ಛಂದ
ಹಗುರ ಹಾರುವುದು
ಗಗನದವಕಾಶದಲಿ
ಚಿಟ್ಟೆ.
ಅದರದೆಂತಹ ಧ್ಯಾನ!

ಎನ್. ಪ್ರಕಾಶ್

ಹೊಸಗನ್ನಡಕ್ಕೆ ಹೊಸಪದಗಳು

- ಆರತಿ

ಕ್ಲಿಂಟನೀಯ :

ದಯನೀಯ ಅಥವಾ ಶೋಚನೀಯ ಪರಿಸ್ಥಿತಿ.

ಉದಾಹರಣೆ :

''ನಮ್ಮ ವಿಕ್ರಮ ಆಫೀಸಿನಲ್ಲಿ ಯಾವ್ದೋ ಹುಡ್ಗೀ ಹತ್ರ ಸಿಕ್ಕಿಕೊಂಡು ಕ್ಲಿಂಟನೀಯ ಪರಿಸ್ಥಿತೀಲಿ ಒದ್ದಾಡ್ತಿದಾನ್ಕಣೇ''

ಲೆವಿನ್ಸ್ಕ್ಯವುದು :

ನಿರ್ಲಕ್ಷ್ಯದಿಂದ ಉಟ್ಟಬಟ್ಟೆಯನ್ನು ಒಗೆಯದೇ ಹಾಗೆಯೇ ಡ್ರಾನಲ್ಲಿ ತುರುಕುವುದು

ಉದಾಹರಣೆ :

''ನಮ್ಮ ಸುಚಿತ್ರಾ ತೀರ ಶೋಂಭೇರಿ. ಮೊನ್ನೆ ಅವಳ ರೂಂ ಡ್ರಾ ತೆಗೆದು ನೋಡಿದ್ರೆ ಮೂರು ಚುಡೀದಾರ್‌ಗಳನ್ನ ಲೆವಿನ್ಸ್ಕಿದ್ದಳೂರೀ''

ಯಲ್ಸ್ಟಿನಿಸು :

ಸರ್ವನಾಶಮಾಡು

ಉದಾಹರಣೆ :

''ನಮ್ಮ ಚಿಕ್ಕಮಾವನಿಗೆ ಚಿಕ್ಕಮಗಳೂರಿನಲ್ಲಿ ಎರಡು ಕಾಫೀತೋಟ ಇತ್ತುರೀ. ಎರಡೇ ವರ್ಷದಲ್ಲಿ ಎಲ್ಲಾನೂ ಯಲ್ಸ್ಟಿನಿಸಿ ಬಿಟ್ಟ ಆ ಮಹರಾಯ!''

ರೇವಣ್ಣವಾದ :

ಅತೀವ ಪಿತೃಭಕ್ತಿ

ಉದಾಹರಣೆ :

''ರೆವೆನ್ಯೂ ಇನ್ಸ್ಪೆಕ್ಟರ್ ಮಗು ಚಾಮು ಎಷ್ಟು ಚುರುಕು ಅಂತೀರಿ, ಮುಂದೆ ನೀನೇನಾಗ್ತೀಯಾಪ್ಪಾ ಅಂತ ಕೇಳಿದ್ರೆ, ನಾನು ನಮ್ಮಪ್ಪಂತರಾನೇ ಚಂಪಾದಿಸ್ತೀನಿ ಅಂತ ಮುದ್ದು ಮುದ್ದಾಗಿ ಹೇಳ್ತು. ಅದರ ರೇವಣ್ಣವಾದ ಮೆಚ್ಚಬೇಕಾದ್ದೇ''

ಸುಷ್ಮಾಸ್ವರಾಜ್ಯ :

ಮಹಿಳಾ ಮೇಲುಗೈ ಇರುವ ಸಂಘ ಸಂಸ್ಥೆ.

ಉದಾಹರಣೆ :

''ಕಮಲಾಪುರ ರಿಕ್ರಿಯೇಷನ್ ಕ್ಲಬ್ಬಿನಲ್ಲಿ ಪ್ರೆಸಿಡೆಂಟು, ಸೆಕ್ರೆಟರಿ, ಟ್ರೆಷರರ್ರೂ ಎಲ್ಲಾ ಮಹಿಳೆಯರೇ ಸೇರಿಕೊಂಡು ಸುಷ್ಮಾಸ್ವರಾಜ್ಯ ನಡೆಸ್ತಿದಾರಂತೇರೀ''

ಸಿನ್ಹೋದ್ವೇಗ :

ಎಲ್ಲ ದಿಕ್ಕುಗಳಿಂದ ಹೊಡೆತ ಬಿದ್ದಾಗ ಉಂಟಾಗುವ ಮನೋಸ್ಥಿತಿ

ಉದಾಹರಣೆ :

''ನಮ್ಮ ಭೈರಾರೆಡ್ಡೀ ತಗೊಂಡಿದ್ದ ಕಂಟ್ರಾಕ್ಟ್ ಮುಳುಗಿ ಹೋಯ್ತುಂತೆ. ಮಗಳು ಡೈವೋರ್ಸ್ ಕೊಟ್ಟು ಮನೇಗ್ಬಂದಿದಾಳಂತೆ. ಅವನ ಸಿನ್ಹೋದ್ವೇಗ ನೋಡುಕ್ಕಾಗುಲ್ಲಾರೀ''

ಅಟಳಶೈಲಿ :

ಪದಗಳ ನಡುವೆ ಹತ್ತು ಸೆಕೆಂಡ್. ವಾಕ್ಯಗಳ ನಡುವೆ ಇಪ್ಪತ್ತು ಸೆಕೆಂಡ್.

ಉದಾಹರಣೆ :

''ಮದುವೇಗೇ ಅಂತ ಅಮೆರಿಕಾಯಿಂದ ಬಂದಿದಾನಲ್ಲ ನಮ್ಮ ರಾಜು ಮಗ ಶೇಷು, ಅವನ ಮಾತುಕಥೇನೇ ಬಲು ನಿಧಾನ, ಹುಡುಗಿ ಒಪ್ತೇನೋ ಅಂತ ಕೇಳಿದ್ರೆ ಅವನು ಅಟಳಶೈಲೀಲಿ ಉತ್ತರಿಸೋ ಹೊತ್ತಿಗೆ ಆ ಹುಡುಗಿ ಬೇರೆ ಯಾನ್ನೋ ಒಪ್ಪಿಕೊಂಡು ಬಿಟ್ಲಂತೆ.''

ಜೆಜೆಭೂತ :

ಒಂದು ಆಧುನಿಕ ವರಸೆಯ ಕರ್ಣಪಿಶಾಚಿ.

ಉದಾಹರಣೆ :

''ನಮ್ಮ ಸೀತಕ್ಕನ ಮನೇಲಿ ಒಂದು ಜೆಜೆಭೂತ ಹೊಕ್ಕೊಂಬಿಟ್ಟಿತ್ತೀರೀ. ಮನೇಗೆ ಯಾರಾದ್ರೂ ಬಂದ್ರೂ ಅಂತ ಚಾಪೇ ಹಾಸುಕ್ಕೆ ಹೋದ್ರೆ, ಆ ಭೂತ ಸೀತಕ್ಕನ ಕಿವೀಲಿ ''ನಾನು ಚಾಪೆ ಎಳೀತೀನಿ, ನಾನು ಚಾಪೆ ಎಳೀತೀನಿ'' ಅಂತ ಕಂಟಿನ್ಯುಯಸ್ಸಾಗಿ ಪಿಸುಗುಟ್ಟುತ್ತಾ ಇತ್ತಂತೆ. ಪಾಪ, ಸೀತಕ್ಕನಿಗೆ ದಿಕ್ಕೇ ತೋಚಲಿಲ್ಲವಂತೆ. ಕೊನೇಗೆ ನಮ್ಮ ಶಾಮ್ ಚಿಕ್ಕಪ್ಪ ಒಂದು ಉಪಾಯ ಹೇಳಿಕೊಟ್ಟನಂತೆ, ಸೀತಕ್ಕಂಗೆ. ಮುಂದಿನ ಬಾರಿ ಜೆಜೆ ಪಿಸುಗುಟ್ಟಿದಾಗ ಸೀತಕ್ಕ ಜೋರಾಗಿ ''ಎಳಿ'' ಅಂದಳಂತೆ. ಅಂದಿನಿಂದ ಭೂತದ ಕಾಟ ತಪ್ತಂತೇರೀ.''

ಡಿ. ಬ್ರ್ಯಾಡ್ಮನ್ ಬಿ. ನಾನು - 0

ಅ.ರಾ.ಸೇ.

ಪ್ರವೇಶ:

ಕ್ರಿಕೆಟ್ಟಿನಲ್ಲಿ ಕೆಲವು ಪ್ರಸಿದ್ಧವಾದ ಸ್ಕೋರ್ ಬೋರ್ಡ್‌ಗಳಿವೆ.

ಉದಾಹರಣೆಗೆ:

ಇಂಗ್ಲೆಂಡ್ XI

ಲೆನ್ ಹಟನ್ - ಬಿ..... - 0

ಸಟ್‌ಕ್ಲಿಫ್ - ಬಿ ಡಿಟ್ಟೋ - 0

ಇನ್ನೊಬ್ಬನು - ಬಿ ಡಿಟ್ಟೋ - 0

ಮೊತ್ತ ಮೂರು ವಿಕೆಟ್ಟಿಗೆ - 0

ಆದರೆ ಈ ಸ್ಕೋರ್ ಬೋರ್ಡ್ ವಿಷಯಗೊತ್ತೇ?

ಡಿ. ಬ್ರ್ಯಾಡ್ಮನ್ - ಬಿ. ನಾನು - 0

ಸ್ವತಃ ಬ್ರ್ಯಾಡ್ಮನ್ನೂ ಈ ಸ್ಕೋರ್ ಬೋರ್ಡನ್ನು ಕಂಡಿರುವನೋ ಇಲ್ಲವೋ ಎನ್ನುವುದು ಅನುಮಾನ. ಆದರೆ ಇದು ನಿಜ.

ಪೀಠಿಕೆ:

ಕನ್ನಡ ನಾಡೇ ಕ್ರಿಕೆಟ್ಟಿನ ತವರು ಎಂದು ನಾವು ಸಾರಿ ಸಾರಿ ಹೇಳುತ್ತಿದ್ದರೂ ಯಾರೂ ಹೇಳುತ್ತಿಲ್ಲ. ಏಕೆಂದರೆ ಕನ್ನಡಿಗರು ಸ್ವಾಭಿಮಾನ ಶೂನ್ಯರು. ಕ್ರಿಕೆಟ್ ಕೊನೆಯಪಕ್ಷ ಒಂದು ಸಾವಿರದ ಐವತ್ತು ವರ್ಷಗಳಿಗೆ ಹಿಂದೆ ಕನ್ನಡ ನಾಡಿನಲ್ಲಿ ಉಚ್ಛ್ರಾಯಸ್ಥಿತಿಯಲ್ಲಿದ್ದು ಕನ್ನಡ ಕಾವ್ಯದಲ್ಲೂ ಇದರ ದಾಖಲೆ ಇದೆ. ರನ್ನ ಅಂತ ಹೆಸರು ಕೇಳಿದ್ದೀರಾ? ಅವನು ಸಾಹಸಭೀಮವಿಜಯ ಅಂತ ಒಂದು ಕಾವ್ಯ ಬರೆದಿದ್ದಾನೆ ಗೊತ್ತೇ? ಅದನ್ನೇ ಶ್ರೀಯವರು ಗದಾಯುದ್ಧನಾಟಕ ಅಂತ ಸಂಗ್ರಹಿಸಿದರು ಗೊತ್ತೇ?

ಅದರಲ್ಲಿ ಒಂದು ಮಾತು ಬರುತ್ತದೆ. ಅದನ್ನು ಸಂಜಯನಿಗೆ ದುರ್ಯೋಧನ ಹೇಳಿದ.

'ಎನಗೆ ಮನಮಿಂದು ಶೂನ್ಯಂ, ಮನೆ ಶೂನ್ಯಂ, ಬೀಡು ಶೂನ್ಯಮಾಯ್ತು, ಸಕಲಾವನಿ ಶೂನ್ಯಮಾಯ್ತು ದುಶ್ಶಾಸನನಿಲ್ಲದೆ, ಕರ್ಣನಿಲ್ಲದೆ ಆನೆಂತಿರ್ಪೆಂ'

ರನ್ನ ಇದನ್ನೇಕೆ ಬರೆದ? ಯೋಚಿಸಿ: ಕೌರವ ಪಾಂಡವರಿಗೆ ನಡೆದ ಟೆಸ್ಟ್ ಮ್ಯಾಚಿನಲ್ಲಿ ದುರ್ಯೋಧನನು ಸೊನ್ನೆಗೆ ಔಟಾದ ಎಂದು ಸಂಜಯ ಧೃತರಾಷ್ಟ್ರನಿಗೆ ಹೇಳಿದ. ಏಕೆ ಹೀಗೆ? ಕೇಳಿಕೊಂಡು ಬಾ ಎಂದು ಧೃತರಾಷ್ಟ್ರನು ಸಂಜಯನನ್ನು ರಣರಂಗಕ್ಕೆ

ಕಳಿಸಿದ. ವೈಶಂಪಾಯನ ಸರೋವರದ ಬಳಿ. ರಣರಂಗದಿಂದ ಔಟಾಗಿದ್ದ (ಅಂದಹಾಗೆ ರನ್ ಎಂಬ ಶಬ್ದವು ರನ್ನ ಎಂಬ ಹೆಸರಿನಿಂದಲೇ ಬಂದಿದೆ) ದುರ್ಯೋಧನ ಸಂಜಯನಿಗೆ ಸಿಕ್ಕು ಈ ಮಾತು ಹೇಳಿದ. ಇದನ್ನು ಹೊಸಗನ್ನಡದಲ್ಲಿ ಹೇಳಿದರೆ ದುಶ್ಶಾಸನ, ಕರ್ಣರಿಬ್ಬರೂ ಸೊನ್ನೆಗೆ ಔಟಾದರು ಅವರಾದುದನ್ನು ನಾನು ಆಗ ದಿರುವೆನೇ?

ಸ್ಕೋರ್ ಬೋರ್ಡ್ ಹೀಗಿದೆ

ಕರ್ಣ ಬಿ. ಅರ್ಜುನ - 0

ದುಶ್ಶಾಸನ ಬಿ. ಭೀಮ - 0

ದುರ್ಯೋಧನ - ರಿಟೈರ್ಡ್ ಅಬ್ಸ್ಟಾಂಡಿಂಗ್ - 0

ಮೊತ್ತ ಮೂರು ವಿಕೆಟ್ಟುಗಳಿಗೆ ಶೂನ್ಯ ಮಹಾಭಾರತದಲ್ಲಿ ಕ್ರಿಕೆಟ್ ಇಲ್ಲದಿದ್ದರೂ ತನ್ನ ಸ್ವಾನುಭವವನ್ನೇ ರನ್ನ ಹೀಗೆ ಹೇಳಿಕೊಂಡಿದ್ದಾನೆ. ರಕ್ಕಸಗಂಗ ಇಲೆವೆನ್‌ನಲ್ಲಿ ರಕ್ಕಸಗಂಗ, ಚಾವುಂಡರಾಯರಿಬ್ಬರೂ ಶೂನ್ಯಕ್ಕೆ ಔಟಾದ ಮೇಲೆ. ನಾನು ಹೇಗೆ ರನ್ ಹೊಡೆಯಲು ಸಾಧ್ಯ ಎಂದು ರನ್ನನು ಸೊನ್ನೆಗೆ ಔಟಾಗಿದ್ದ ಆದರೂ ಮ್ಯಾಚನ್ನು ಗೆದ್ದವರು ರಕ್ಕಸಗಂಗ ಟೀಮಿನವರು

ಕಥಾನಕ

ಮುಗಿಲು ಹಳ್ಳಿ ಕ್ರಿಕೆಟ್ ಎಂದೂ-ರಾಜ್ಯ ಮಟ್ಟದಲ್ಲಾಗಲೀ, ರಾಷ್ಟ್ರೀಯ ಮಟ್ಟದಲ್ಲಾಗಲೀ ಪ್ರಸಿದ್ಧಿ ಪಡೆಯದಿರುವುದಕ್ಕೆ ಪತ್ರಿಕೆಗಳೇ ಕಾರಣವೇ? ಎಲ್ಲೂ ಎಂದೂ ಮುಗಿಲುಹಳ್ಳಿ ಕ್ರಿಕೆಟ್ ಹೆಡ್‌ಲೈನ್ ತಲುಪಿಲ್ಲ.

ಇದಕ್ಕೆ ಕಾರಣ ಡಾರ್ವಿನ್ ಎಂದರೆ ಏನು ತಪ್ಪಾಗಲಾರದು. ಸರ್ವೈವಲ್ ಆಫ್ ದಿ ಫಿಟೆಸ್ಟ್ ಎಂಬ ತತ್ತ್ವ ಕ್ರಿಕೆಟ್‌ಗೆ ಅನ್ವಯವಾಗುವುದಿಲ್ಲ. ಉದಾಹರಣೆಗೆ ಲಾರ್ಡ್ಸ್ ಮ್ಯಾಚಿನಲ್ಲಿ ಶ್ರೀನಾಥನ ಬೌಲಿಂಗಿನಲ್ಲಿ ಎರಡು ಕ್ಯಾಚುಗಳನ್ನು ಅಜರ್ ಮತ್ತು ಜಡೇಜಾ ಬಿಟ್ಟಿದ್ದರಿಂದಲೇ ಅಲ್ಲವೇ ಸಚಿನ್‌ಗೆ ಕೀರ್ತಿ ಬಂದದ್ದು? ಇವನು ಫಿಟೆಸ್ಟ್ ಎಂದು ಹೇಗೆ ಹೇಳಲು ಸಾಧ್ಯ. ಲಕಿಯೆಸ್ಟ್ ಎಂದು ಮಾತ್ರ ಹೇಳಬಹುದು. ಆದರೆ ಲಕ್ ಇದ್ದವರೇ ಫಿಟೆಸ್ಟ್ ಎಂದು ಡಾರ್ವಿನ್ ಒಪ್ಪಿದ ಹಾಗಾಯಿತು. ಎರಡನೇ ಮಹಾಯುದ್ಧದ ನಂತರ ಜರ್ಮನಿಯ ವಿಜ್ಞಾನಿಗಳನ್ನು ಲಪಟಾಯಿಸುವುದರಲ್ಲಿ ಅಮೆರಿಕಕ್ಕಿಂತ ರಷ್ಯವೇ ಹೆಚ್ಚು ಲಕ್ ಪಡೆದಿತ್ತು. ಆದರೂ ರಷ್ಯ ಕುಸಿಯಿತು. ಇದರಿಂದಾಗಿ ಲಕ್ ಇದ್ದರೂ ಫಿಟೆಸ್ಟ್ ಆಗುವರೆಂಬ ನಂಬಿಕೆ ಇಲ್ಲ. ಆದುದರಿಂದ ಛಾನ್ಸ್ ಫ್ಯಾಕ್ಟರೇ ಸರ್ವೈವಲ್‌ನಲ್ಲಿ ಅತಿಮುಖ್ಯ ಎಂದು ಒಪ್ಪಿಕೊಳ್ಳಬೇಕು. ಡಾರ್ವಿನ್ ನೀನು ತಪ್ಪಿದ್ದೀ! ನಾನು ಬ್ರಾಡ್ಮನ್ನನನ್ನು ಔಟ್ ಮಾಡಿದ್ದು ಪ್ರಸಿದ್ಧವಾಗದಿರಲು ಈ ಛಾನ್ಸ್ ಫ್ಯಾಕ್ಟರೇ ಕಾರಣ.

ಮುಗಿಲು ಹಳ್ಳಿ ಕ್ರಿಕೆಟ್ ಕ್ಲಬ್‌ನ ಮುಖ್ಯ ಪಾತ್ರಧಾರಿಗಳನ್ನು ನಾವೀಗ ಪರಿಚಯ ಮಾಡಿಕೊಳ್ಳೋಣ.

ರುದ್ರೇಶಿ:

ಸ್ಲೋ ಬೌಲರ್. ಎಂದೂ ರನ್ ಕೊಡಲಿಲ್ಲ, ವಿಕೆಟ್ಟೂ ತೆಗೆದುಕೊಳ್ಳಲಿಲ್ಲ.

ಕೊಟ್ರ: ಇವನು ಕಬ್ಬಾಳು ಗ್ರಾಮದಲ್ಲಿ ಪಾರ್ಟಿ ಹೊಡೆದಾಟಗಳಲ್ಲಿ ಅತಿ ಹೆಚ್ಚು ಹಣ ಕೊಟ್ಟವರ ಕಡೆ ನಿಂತು ಎದುರಾಳಿಗಳ ಮೇಲೆ ಕವಣೆಗಲ್ಲು ಹೊಡೆಯುತ್ತಿದ್ದ. ಎರಡು ಪಾರ್ಟಿಯವರೂ ಇವನನ್ನು ಒದ್ದು ಓಡಿಸಿದರು. ಮುಗಿಲು ಹಳ್ಳಿ ಮಾರ್ಕೆಟ್ಟಿನಲ್ಲಿ ಬೀಡಿ ಅಂಗಡಿ ಮಾಲಿಕ. ಕ್ರಿಕೆಟ್ ಇವನ ಹವ್ಯಾಸ, ಫಾಸ್ಟ್ ಬೌಲರು.

ಜುಗ್ಗ: ಸರವಟೆ, ಬ್ಯಾನರ್ಜಿ, ನಸ್ಸರ್ ಮೊದಲಾದವರ ಸಾಲಿಗೆ - ಸೇರಿದವನು. ಓಪನಿಂಗ್ ಬ್ಯಾಟ್ಸ್‌ಮನ್. ಟೀಮಿಗೆ ಟೀಮೇ ಎಕ್ಕುಟ್ಟಿ ಹೋದರೂ ಇವನು ನಾಲ್ಕು ಅಥವಾ ಐದು ನಾಟೌಟ್. ಹೈಯೆಸ್ಟ್ ಸ್ಕೋರ್ ಏಳು.

ಮತ್ತಿತರರು. ಇವರಲ್ಲಿ ಅತಿ ಪ್ರಸಿದ್ಧನಾದವನು ಡಿ. ಬ್ರಾಡ್ಮನ್. ಅವನ ಹೆಸರೇನೋ ಗೊತ್ತಿಲ್ಲ. ಎಲ್ಲರೂ ಅವನನ್ನು ದೊಣ್ಣೆ ಅಥವಾ ಬ್ರಾಡ್ಮನ್ ಎಂದು ಕರೆಯುತ್ತಿದ್ದರು. ಮೂರು ವಿಕೆಟ್‌ಗಳನ್ನಿಡಲು ಬೇಕಾಗುವ ಜಾಗದ ಮೂರರಷ್ಟು ಅಗಲಕ್ಕಿದ್ದ. ಯಾವಾಗಲೂ ನಗುಮುಖಿ. ಭಂಡ ಎಂದು ಕೆಲವರು. ನಗು ಮನೋಭಾವದವನು ಎಂದು ಕೆಲವರು ಇವನು ಕ್ರಿಕೆಟ್ಟಿಗೆ ಬಂದುದೇ ಒಂದು ಆಕಸ್ಮಿಕ.

ಯುದ್ಧಕಾಲದಲ್ಲಿ (ಎರಡನೇ ವಿಶ್ವ ಮಹಾಯುದ್ಧ) ಇಟ್ಯಾಲಿಯನ್ ಕೈದಿಗಳು ಮುಗಿಲು ಹಳ್ಳಿಗೆ ಬಂದಾಗ ನಮ್ಮೂರಿನ ಫುಟ್‌ಬಾಲ್ ಕ್ಲಬ್ಬಿನವರು ಅವರೊಂದಿಗೆ ಮ್ಯಾಚ್ ಆಡಲಾರಂಭಿಸಿದರು. ಯಾವಾಗಲೂ ಇಟ್ಯಾಲಿಯನ್ನರೇ ಗೆಲ್ಲುತ್ತಿದ್ದರು. ಸ್ಕೋರು ಅತಿ ಕಡಮೆ ಅಂದರೆ 26-0.

ಈ ಕಗ್ಗೊಲೆಯನ್ನು ನಿಲ್ಲಿಸಲು ಊರಿನ ಜನ ಬ್ರಾಡ್ಮನ್ನನನ್ನು ಗೋಲಿ ಮಾಡಿದ ಮೇಲೆ ಅದು 10-0, 8-0 ಗ್ರೇಡಿಗೆ ಇಳಿಯಿತು. ಹೀಗಿರುವಾಗ ಒಂದು ದಿನ ಇಟಲಿಯ ಜಾನ್ ತನ್ನ ಎಂದಿನ ವೇಗದಲ್ಲಿ ಎಡಗಾಲನ್ನು ಮೇಲೆತ್ತಿ ಕೈಯಿಂದ ಚೆಂಡು ದಬ್ಬುತ್ತಾ ಗೋಲಿನ ಬಳಿಗೆ ಬಂದ. ಬ್ರಾಡ್ಮನ್ ಅವನನ್ನು ತಡೆಯಲು ಹೋದ. ಜಾನ್‌ನ ಎಡಗಾಲು, ಎಡಗೈಗಳೆರಡು ಬ್ರಾಡ್ಮನ್ನನ ಹೊಟ್ಟೆಗೆ ಬಡಿದು ಅವನು ನೆಲಕಚ್ಚಿದ. ಅವನನ್ನು ಮೇಲಕ್ಕೆಬ್ಬಿಸಿದ ಷಣ್ಣೆ, ಕಾಫಿ ಕುಡಿಸಲು ಅವನನ್ನು ಕ್ಲಬ್ ಹೋಟೆಲಿಗೆ ಕರೆದೊಯ್ದ. ದಾರಿಯಲ್ಲಿ ಹೈಸ್ಕೂಲಿನ ಬಿ ಟೀಮು ಪ್ರಾಕ್ಟಿಸ್ ಮಾಡುತ್ತಿತ್ತು. ಅದರ ಅನ್‌ವಾಂಟೆಡ್ ಆಟಗಾರ ನಾನು. ಷಣ್ಣೆ ನಮ್ಮ ಟೀಮಿನ ಗೌರವ ಸಲಹೆಗಾರ. ನಿನಗೆ ಒಂದು ಛಾನ್ಸ್ ಕೊಡಸ್ತೀನಿ ಎಂದವನು ಕೃತಯುಗದ ಆರಂಭದಿಂದ ನನಗೆ ಆಶ್ವಾಸನೆ ಕೊಡುತ್ತಾ ಬಂದಿದ್ದ.

ಬ್ರಾಡ್ಮನ್, ಷಣ್ಣೆ ಬರುತ್ತಿರುವುದನ್ನು ನೋಡಿ ನಾನು 'ಲೇ ಷಣೇ, ಯಾವಾಗಲೇ ನಂಗೆ ಛಾನ್ಸ್' ಎಂದು ಅವರ ಬೆನ್ನು ಹತ್ತಿದೆ. ಅವರ ಟೂ ಬೈ ತ್ರೀ ಕಾಫಿಯಲ್ಲಿ ನನಗೂ ಒಂದು ಪಾಲು ಬಂತು. ಬ್ರಾಡ್ಮನ್ನನನ್ನು ಮನೆಗೆ ಕರೆದೊಯ್ಯುವ ಬಿಟ್ಟಿ ಚಾಕರಿಯೂ ಬಿತ್ತು.

ಬ್ರಾಡ್ಮನ್ನನದು ಭಾರೀ ಬಂಗಲೆ. ಗೇಟಿನಲ್ಲಿ ಒಬ್ಬ; ಬಾಗಿಲಿನಲ್ಲಿ ಒಬ್ಬ; ಆಳು. ಅವನ ತಂಗಿ ''ಯಣ್ಣಾ ಏನಾಗೆತ್ತೋ ನಿಂಗೆ? ಯಾರು ಒದ್ರ್ರೋ?'' ಎಂದು ಕೇಳುತ್ತಾ ಓಡಿಬಂದವಳು. ನನಗೋ ಎದೆಗೆ ಗುಂಡು ಹೊಡೆದ ಹಾಗಾಯಿತು. ಇಂಥದೊಂದು ಸನ್ನಿವೇಶವನ್ನು ನಾನು ಊಹಿಸಿರಲೂ ಇಲ್ಲ. ಅವಳಿಗೆ ನಡೆದುದನ್ನೆಲ್ಲಾ ಹೇಳಿದೆ. 'ಇವನಾ.... ಪಿಟ.... ಗಂದು, ಯಾತ್ರ ಪುಟ್ಬಾಲೋ ಇದು?' ಎಂದು ಬ್ರಾಡ್‌ಮನ್ ನನ್ನನ್ನು ಕೇಳಿದ.

''ನಂಗೊತ್ತಿಲ್ಲ, ಏನಿದ್ರೂ ಕ್ರಿಕೆಟ್ ಗೊತ್ತು'' ಎಂದೆ. ಬ್ರಾಡ್ಮನನ ತಂಗಿ ''ಆಟ ಅಂದ್ರೆ ಕ್ರಿಕೆಟ್'' ಎಂದಳು.

ಮರುದಿನ ಬ್ರಾಡ್ಮನ್ ಎಂ.ಸಿ.ಸಿ.ಗೆ ಸೇರಿದ ನಾಲ್ಕಾರು ತಿಂಗಳ ನಂತರ ಕ್ರಿಕೆಟಿನ ಸೂಕ್ಷ್ಮಾತಿಸೂಕ್ಷ್ಮಗಳನ್ನು ಅರಿತುಕೊಂಡ. ಅದರಲ್ಲಿ ಅತ್ಯಂತ ಮಹತ್ವದ್ದು ಎಂದರೆ

''ಕ್ರಿಕೆಟ್ ತಾರೆಯಾಗಲು ಅಂಪೈರಿನ ದಯೆಯೇ ಮುಖ್ಯ (ಜೀವನದಲ್ಲಿ ಗೆಲ್ಲಲು ದೇವರ ದಯೆ ಬೇಕು ಎಂದು ಒಪ್ಪಿಕೊಂಡರು ಸಹಾ.)'' ಬ್ರಾಡ್ಮನ್ ಹಣಗಾರ. ಅವನು ಮನೆ ಕಾವಲುಗಾರರಿಗೆ ಕೊಡುತ್ತಿದ್ದಷ್ಟನ್ನು ನನಗೆ ಕೊಟ್ಟಿದ್ದಿದ್ದರೆ ನಾನು ಇಂಜಿನಿಯರೋ ಡಾಕ್ಟರೊ ಆಗುತ್ತಿದ್ದೆ. ಅವನ ಅಥವಾ ಯಾರ ಹಣವೂ ನನಗೆ ಬೇಕಿರಲಿಲ್ಲ. ಯಾಕೆ ಇಂಜಿನಿಯರಾಗಬೇಕು? ಕೈಗಾ ಗುಮ್ಮಟದಂತೆ ಕುಸಿಯುವ ಕಟ್ಟಡಗಳನ್ನು ಕಟ್ಟಿ ಪರ್ಸೆಂಟೇಜ್ ಹೊಡೆದು ಮೇಲಿನವರಿಗೆ ಕೆಳಗಿನವರಿಗೆ ಕೊಟ್ಟು ಕೈಮುಗಿಯಲೇ? ಡಾಕ್ಟರ ಸುದ್ದಿ ದೂರ. ಚಿಕಿತ್ಸಕನ ನಾದರಿಸದವಗೆ ಆರೋಗ್ಯ ಹಾನಿಯಂತೆ. ಈಗ ನೋಡಿ ಯಥಾ ಪ್ರಕಾರ ಇದ್ದೇನೆ. ಇನ್ನೊಂದು ವರ್ಷದ ದಬ್ಬಿದರಾಯ್ತು. ಎಲ್ಲರಿಗೂ ಆರೋಗ್ಯ ಅಂತ ಸರ್ಕಾರ ಘೋಷಿಸಿದೆ! ಬ್ರಾಡ್ಮನ್ ಹಾಗಲ್ಲ. ಅವನು ಯಶಸ್ಸಿನ ಉತ್ತುಂಗ ಶಿಖರವನ್ನೇರಲು ಉದ್ದೇಶಿಸಿ, ಅಂಪೈರ್ ಷಣ್ಮುಖಿಯ ಆಪ್ತನಾದ ಯಶಸ್ಸು ಯಾರ ಅಪ್ಪನ ಇಚ್ಛೆಗೆ ಬರದೆ ಬಿಟ್ಟೀತು!

ಹೀಗಿರಲು ಧಾರವಾಡದಿಂದ ಕನ್ನಡದ ಪ್ರಥಮ ಶ್ರೇಣಿಯ ಸಾಹಿತಿಗಳೊಬ್ಬರ ಉಸ್ತುವಾರಿಯಲ್ಲಿ ಕಾಲೇಜ್ ಟೀಮೊಂದು ಮುಗಿಲುಹಳ್ಳಿಗೆ ಬಂತು. ಅವರು ವೈಜ್ಞಾನಿಕ ಮನೋಭಾವದವರು. ಮುಹೂರ್ತ ನೋಡಿ ಹೊರಡಲಿಲ್ಲ. ಗ್ರಹಚಾರ ವಕ್ರಿಸಿತು. ಹದಿನಾಲ್ಕು ಜನರ ಟೀಮಿನಲ್ಲಿ ನಾಲ್ಕು ಜನರನ್ನು ರೈಲಿನಿಂದ ಸ್ಟ್ರೆಚರಿನಲ್ಲೇ ಅವರ ಬಿಡಾರಕ್ಕೆ ಸಾಗಿಸಬೇಕಾಯಿತು. ಮ್ಯಾನೇಜರರು ಕಂಗಾಲಾದರು. ಒಬ್ಬ ಆಟಗಾರನನ್ನು ಕಡ ಕೇಳಿದರು. ಮುಗಿಲು ಹಳ್ಳಿ ಕ್ರಿಕೆಟ್ ಕ್ಲಬ್ (ಎಂ.ಸಿ.ಸಿ.) ಬ್ರಾಡ್ಮನ್ನನನ್ನು ಅವರಿಗೆ ಕಡಕೊಡಲು ನಿರ್ಧರಿಸಿತು.

ಬಿಸಲೇಕೊಪ್ಪ, ವಣಕುದ್ರಿ, ಮೂಲಿಮನಿ, ತೇರದಾಳಕರ್ ಇತ್ಯಾದಿಗಳೊಡನೆ ಬ್ರಾಡ್ಮನ್ ಸೇರಿದ.

ಆಗ ನನಗೆ ಶುಕ್ರದೆಸೆ ಆರಂಭವಾಯಿತು. ಬ್ರಾಡ್ಮನ್ ಏಕ್ದಂ ನಮ್ಮ ಕ್ಲಾಸಿಗೆ ಬಂದು ನನ್ನನ್ನು ಕರೆದ. ಜೊತೆಗೆ ಹೋಗುವಾಗ 'ನಾನೆಲ್ಲಾ ಅರೇಂಜ್ ಮಾಡೆದಿನಿ. ನಿನ್ನ ಎಂ.ಸಿ.ಸಿ.

ಟೀಮಿಗೆ ಸೇರ್ಸಿದಿನಿ. ಹೆಂಗೆ ಬೌಲ್ ಮಾಡ್ಬುಕು ಅಂದ್ರೆ ಫುಲ್‌ಟಾಸು. ನಾಕುಬಾಲಿಗೆ ನಾಕು ಸಿಕ್ಸರು.' ಎಂದು ಹೋಗಿಬಿಟ್ಟ. ನಾನು ಹಾಕುತ್ತಿದ್ದುದು ಗಿಡ್ಡಚೆಡ್ಡಿ. ಮನೆಗೆ ಓಡಿಹೋಗಿ ಅಣ್ಣನ ಪ್ಯಾಂಟ್ ಏರಿಸಿಕೊಂಡು ಫೀಲ್ಡಿಗೆ ಬರುತ್ತಿದ್ದೆ. ಹೇಳಬೇಕು ಅಂದರೆ ನನಗೆ ಬ್ಯಾಟಿಂಗ್ ಬೌಲಿಂಗ್ ಫೀಲ್ಡಿಂಗ್ ಮೂರೂ ಬರುತ್ತಿರಲಿಲ್ಲ. ಅವರು ನೋಡಿದರೆ ಧಾರವಾಡದ ಮಂದಿ. ನಾನು ನೋಡಿದರೆ ಮುಗಿಲುಹಳ್ಳಿ ಬಕ್ರ.

ಇದ್ದಕ್ಕಿದ್ದ ಹಾಗೇ ಯಾರೋ ಹಿಂದಿನಿಂದ ಬಂದು ನನ್ನ ಕಾಲರ್ ಹಿಡಿದು ಎಳೆದರು. ಹಿಂದಿದ್ದ ಹತ್ತಾರು ಜನ 'ಛಾನ್ಸಲೇ ಮಗನೇ' ಎಂದು ಕೇಕೆ ಹಾಕಿದರು. ತಿರುಗಿ ನೋಡಿದರೆ ಬ್ರಾಡ್ಮನ್ನನ ತಂಗಿ.

'ಏನು?' ಎಂದು ಕೇಳಿದೆ

'ಇವ್ನೋಸಡಗ, ಮಜ್ವಾಳಾಗ, ನೆಗ್ದುಬಿದ್ದು ನೆಲ್ಲಿಕಾಯಾಗ! ಸಿನಿಮಾಕ್ಕೆ ಹೋಗ್ತಿನಿ ಐದು ರೂಪಾಯಿ ಕೊಡು ಅಂದ್ರೆ ಇಲ್ಲ ಅಂತನೆ. ಇವ್ನು ಇವತ್ತು ಸೆಂಚುರಿ ಹೊಡಿತನಂತೆ. ನನ್ನ ಶಾಪ ಇವ್ನಿಗೆ ತಟ್ಟಲಿ. ಹೆಣ್ಮಕ್ಕನ್ನ ಉಸರುಗರ್ಸಿರರು ಯಾರೂ ಉದ್ಧಾರಾಗಿಲ್ಲ' ಎಂದಳು.

'ನನಗೆ ಯಾಕೆ ಹೇಳ್ತಿ?' ಎಂದು ಕೇಳಿದೆ.

'ಇವ್ನು ಔಟಾಗ ಹಂತೆ ಏನಾರ ಮಾಡು, ನಿಂಗೆ ಕೇಳಿದ್ದು ಕೊಡ್ತೀನಿ.'' ಎಂದಳು. 'ತಥಾಸ್ತು!' ಎಂದೆ.

ಶಾಲೆಗೆ ರಜಾ ಘೋಷಿಸಿದರು. ಹನ್ನೆರಡು ಗಂಟೆಗೆ ಮ್ಯಾಚ್ ಆರಂಭವಾಯಿತು. ಧಾರವಾಡದವರು ಟಾಸ್‌ಗೆದ್ದು ಬ್ಯಾಟಿಂಗ್ ಆರಂಭಿಸಿದರು.

ತಿಪ್ಪೇಶಿ ಬಾಲೆಸೆಯಲು ಆರಂಭಿಸಿದ. ಆ ಬಾಲು ನೋಡಿದರೆ ಕಣ್ಣು ಗಿಮಿಗುಟ್ಟುತ್ತಿತ್ತು. ಆದರೆ ಬಿಸಲೇಕೊಪ್ಪ ಅಂಡ್ ಕಂಪನಿಯವರು ಬ್ಯಾಟಿನಿಂದ ಅದನ್ನು ಮುಟ್ಟಿ ಅನಾಯಾಸವಾಗಿ ಬೌಂಡರಿ ಹೊಡೆಯುತ್ತಿದ್ದರು.

ಬೌಂಡರಿ ಲೈನಿನಲ್ಲಿ ನಾನು ರುದ್ರೇಶಿ ಫೀಲ್ಡ್ ಮಾಡಲು ನಿಂತಿದ್ದೆವು. ಓವರ್ ಬದಲಾದಾಗ ರುದ್ರೇಶಿ 'ಇವತ್ತು ಗ್ಯಾರಂಟಿ ವಿಕೆಟ್' ಎಂದು ನಿರ್ಧರಿಸಿದ.

ಐದನೇ ಓವರಿನ ಕೊನೆಗೆ ಧಾರವಾಡದವರು ಐವತ್ತೆರಡು ಫಾರ್ ನೋಲಾಸ್!

ಆರನೇ ಓವರ್ ರುದ್ರೇಶಿಗೆ ಸಿಕ್ಕಿತು.

ಐದು ಬಾಲುಗಳಿಗೆ ಒಂದೂ ರನ್ ಹೊಡೆಯಲು ಬಿಸಲೇಕೊಪ್ಪನಿಗೆ ಆಗಲಿಲ್ಲ. ಆರನೆ ಬಾಲ್ ಬಿಸಲೇಕೊಪ್ಪನ ವಿಕೆಟ್ ಉದುರಿತು. ಪತ್ರಕರ್ತರು ಈ ಐತಿಹಾಸಿಕ ಗಳಿಗೆಯಲ್ಲಿ ಬಂದು ರುದ್ರೇಶಿಯನ್ನು ಕೇಳಿದರು.

''ಈ ವಿಕೆಟ್ ನಿಮ್ಮ ಜೀವನದ ಮಹತ್ಸಾಧನೆ. ನಿಮ್ಮ ಯಶಸ್ಸಿನ ಗುಟ್ಟೇನು? ಹತ್ತು ವರ್ಷಗಳ ನಂತರ ನಿಮಗೊಂದು ವಿಕೆಟ್ ದಕ್ಕಿದೆ. ಅಭಿನಂದನೆಗಳು'' ರುದ್ರೇಶಿ ನಿರ್ಭೀತಿಯಿಂದ ಉತ್ತರಿಸಿದ.

''ಹಳೇ ಪೇಟೆ ದುರ್ಗಮ್ಮನ ದಯೆಯೇ ತನ್ನ ಯಶಸ್ಸಿಗೆ ಕಾರಣ''

ಒನ್ ಡೌನ್, ಬ್ರಾಡ್ಮನ್ ಬಂದ.

''ನಾಕು ಫುಲ್‌ಟಾಸುಗಳು'' ಎಂದು ನನ್ನ ಕಿವಿಯಲ್ಲಿ ಉಸುರಿ ಪಿಚ್ ಕಡೆಗೆ ಹೋದ. ವಣಕುದ್ರಿ ಪಿಚ್ಚಿನಲ್ಲೇ ಇದ್ದ.

ಪವಾಡ ಸದೃಶ ಘಟನೆ ನಡೆಯಿತು. ನನಗೆ ಬೌಲಿಂಗ್ ಕೊಟ್ಟರು. ವಣಕುದ್ರಿ ನಾನೆಸೆದ ಬಾಲನ್ನು ಬಲಕ್ಕೆ ಎರಡು ಅಡಿ ನೆಗೆದು ಹೋಗಿ ಕೆತ್ತಿ ಬಜಾಯಿಸಿದ. ಆದರೆ ಅವನಿಗೆ ಸಿಕ್ಕದ್ದು ಒಂದೇ ರನ್ನು. ಬ್ರಾಡ್‌ಮನ್ ಬಂದ.

ನನಗೆ ಚಿಂತೆಯಾಯಿತು. ಫುಲ್‌ಟಾಸ್ ಎಂದರೇನು, ಅದನ್ನು ಹೇಗೆ ಕೊಡುವುದು? ಬ್ರಾಡ್ಮನ್ನನ ಕೀರ್ತಿ ಗಗನಕ್ಕೇರಿಸಲೇಬೇಕು. ಆದರೆ ಅವನ ತಂಗಿಯ ನಿಟ್ಟುಸಿರು, ಕಣ್ಣೀರು ನನ್ನ ಹೃದಯವನ್ನು ಕೊರೆಯುತ್ತಿದ್ದವು. ಏನು ಮಾಡಲಿ!

ನನಗೆ ಪುಟ್‌ಟಾಸ್, ಗೂಗ್ಲಿ, ಲೆಗ್‌ಸ್ಪಿನ್, ಆಫ್‌ಸ್ಪಿನ್, ಯಾರ್ಕರ್, ಬೌನ್ಸರ್ ಏನೂ ತಿಳಿಯದು. ನಮ್ಮ 'ಬಿ' ಟೀಮಿನ ಕ್ಯಾಪ್ಟನ್ ಜಗ್ಗ. ಅವನ ಯಶಸ್ಸು ದಿಗಂತ ವಿಶ್ರಾಮತವಾದುದು. ಅವನ ಪ್ರಧಾನಾಸ್ತ್ರ 'ಪಿಂಡ' ಜಗ್ಗನ ಪಿಂಡ ಬಿತ್ತೆಂದರೆ ಎದುರಾಳಿ ಔಟ್ ಆದನೆಂದೇ ಅರ್ಥ ಜಗ್ಗನ ಪಿಂಡವನ್ನು ವೀಕ್ಷಿಸಿ ಆ ರಹಸ್ಯವನ್ನು ಅರಿತಿದ್ದೆ!

ಸಾರಥಿ ರಥವನ್ನು ಬಿಟ್ಟುಹೋದ, ರಥವು ಭೂಮಿಯಲ್ಲಿ ಸಿಕ್ಕಿಕೊಂಡಿದೆ. ಕೈಯಲ್ಲಿ ಬಿಲ್ಲು ಬಾಣಗಳಿಲ್ಲ. ಅವನನ್ನು ಕೊಲ್ಲುವುದು ಹೇಗೆ ಎನ್ನುವುದು ಅರ್ಜುನನ ಸಮಸ್ಯೆ. ನನ್ನದು ಅದಕ್ಕೆ ತದ್ವಿರುದ್ಧ. ಕ್ರಿಕೆಟ್ ಅರಿಯೆ. ಬ್ರಾಡ್ಮನ್ ಪ್ರಬಲ. ಅಂಪೈರ್ ಅವನ ಕೈಗೊಂಬೆ.

ಆದರೆ ಅವನು ಗೆದ್ದರೆ ಧಾರವಾಡಕ್ಕೆ ಲಾಭ. ಅವನ ತಂಗಿಯ ಕಣ್ಣೀರಿನ ಹೊಳೆ.

ಕೈಲಿ ಬಾಲಿ ಹಿಡಿದೆ. ಪಿಂಡ ಕರ್ತೃವಾದ ಜಗ್ಗನನ್ನು ನೆನೆದೆ. ಚೆಂಡು ಎಸೆದೆ. ಇನ್ನೇನು ಫುಟ್‌ಟಾಸ್ ಎಂದು ಬ್ರಾಡ್ಮನ್ ಕೊಳ್ಳಿ ಬೀಸಿದ. ಪಿಂಡ ಹೋಗಿ ಬೇಲನ್ನುರುಳುಸಿತು. ಹೌಜ್ಹಾಟ್ ಎಂದು ಎಂ.ಸಿ.ಸಿ. ಯವರು ಅಪೀಲಿದರು. ಷಣ್ಣಿ, ಬ್ರಾಡ್ಮನ್ನಿಗೆ ಔಟ್ ಕೊಡಲೇಬೇಕಾಯ್ತು.

ಭಾವ

ತೀವ್ರತೆ

ಬೇಕು

ಅಕ್ಕನಿಗೆ

ತಂಗಿಗಲ್ಲ

ಎನ್. ಪ್ರಕಾಶ್



ಟಿರನೀ ಆಫ್ ದ ವೀಕ್ ಅಂತ ಹಕ್ಕೀ ಹೇಳಿದ್ದು
ನಿನ್ನನ್ನು ನೋಡೇ ಕಣೇ!

ಬೆಂಗ್ಳೂರ್ಕನ್ಡ

- ಡಾ|| ಬಸವರಾಜ ಸಾದರ

ಕನ್ನಡ್ ನಾಡಿನ್ ಬಾಟಂನಲ್ಲಿ
ಇತ್ತೊಂದ್ಬೆಂದ್ಕಾಳೂರು,
ಹುಡ್ಕಿದ್ರೀಗ ಸಿಗಬೇಕೆಲ್ಲಿ
ಆಗೈತ್ ಇಂಗ್ಲೀಷ್ ಬ್ಯಾಂಗ್ಲೋರ್.

ಕನ್ನಡ್ಮಂದಿ ಇರ್ತಾರಿಲ್ಲಿ
ಹೆಸ್ರಿಗ್ ಈ ನಾಡ್ನವ್ರು,
ಲಾಭ ಸಿಕ್ರೆ ರೆಡಿ ಯಾವ್ದಕ್ಕೂ
ತಾಯಿನ್ ಕಿಲ್ಮಾಡವ್ರು.

ಮಹಾತ್ಮಗಾಂಧಿ ರಸ್ತೇನೊಯ್ದು
ಮಾಡಿದ್ರೆಮ್ಜೀ ರೋಡು,
ಲಂಡನ್ನಾಗೆ ಹುಟ್ಟವ್ರಂಗೆ
ಬೆಳಿಸ್ಯಾರಿಂಗ್ಲೀಷ್ ಕೋಡು.

ಜಯಚಾಮ್ರಾಜರ್ ದೊಡ್ರಾಜ್ಮಾರ್ಗ
ತಟಕಾತ್ ಜೆ.ಸಿ.ರೋಡು,
ಕೃಷ್ಣರಾಜೇಂದ್ರ ವರ್ತುಳಾ ಹೋಗಿ
ಕೆ.ಆರ್. ಸರ್ಕಲ್ ಕೇಡು

ಅರಮನೆಯನ್ನಾಕವಮಾನೇನೊ!
ಅಂದ್ರು ಪ್ಯಾಲೇಸ್ರೋಡು,
ಬನದಾಗಿದ್ದ ಬನಶಂಕ್ರೀಗೂ
ಬಿ ಎಸ್ಕೆದ್ದೇ ಬೀಡು

ಪೂರ್ವಾಂಜ್ನೇಯ ಮಾಡಿದ್ನೇನೋ
ಕನ್ನಡ್ರಾವಣನ್ ಶೋಧಾ,
ಇಂಗ್ಲೀಷ್ನಾಗೇ ಈಟ್ (Eat) ಮಾಡ್ಬಿಟ್ರು
ಕೇಳ್ಬೇಕ್ಯಾರವನ್ ಬಾಧಾ?

ಬಸವನ್ಗುಡಿಗೆ ಯಾವ್ಗತಿ ಬಂತೋ
ರೋಡಾಯ್ತ್ ಬುಲ್ ಟೆಂಬಲ್ಲು,
ಈಜ್ಕೊಳಾ ಹೋಗಿ ಸ್ವಿಮ್ಮಿಂಗ್ಪೂಲಾಯ್ತ್
ಬೇಕೆ ಬ್ಯಾರೆ ಸ್ಯಾಂಪಲ್ಲು!

ಚಿಲ್ರೆ ಇಲ್ಲದ್ ಬಿಗ್ ಶಾಟ್ ಜನ್ರು
ಕಟ್ಟ್ಯಾರ್ ಡಾಲರ್ ಕಾಲ್ನಿ,
ಕಟ್ಮಾಡಾರ್ಟಿ ಅಂದೇಬಿಟ್ಟು
ದೊಡ್ಕವಿ ಟ್ಯಾಗೋರರ್ನ.

ತರ್ಜ್ಮೆ ಆದ್ರೆ ಮರ್ಯಾದ್ಗೇಡು
ಉಳದ್ವೈತ್ಕನ್ನಿಂಗ್ ಹ್ಯಾಮು,
ಮೆಜೆಸ್ಟಿಕ್ನಲ್ಲಿರೋದೆಲ್ಲಾ
ಇಂಗ್ಲೀಷ್ ಸರಂಜಾಮು

ಹೆಂಡ್ಕುಕಿದ್ರೆ ಕನ್ನಡ್ದ್ಹೆಂಡಾ
ಈಗೆಲ್ಲಿಗ್ಬೇಕಂಡ್ರಿ,
ಕೇಳಿದ್ಕೂಡ್ಲೆ ತಂದಿಡ್ತಾರೆ
ರಮ್ಮು ಬೀರು ಬ್ರಾಂಡಿ

ಬಿ ಎಮ್ ಶ್ರೀಗ್ಳು ಬಾಳ್ಹಿಂದೇನೇ
ಅಂದ್ರು ಕನ್ನಡಾ ಗೆಲ್ಗೆ,
ಏರಿಸ್ಬಿಟ್ರು ಅವ್ವನ್ನೈಕ್ಳೆ
ಕನ್ನಡಾ ಇಂಗ್ಲೀಷ್ ಗೆಲ್ಗೆ

ದೀಪದ್ಕೆಳ್ಗೇ ಕತ್ಲಾ ಇರೋದ್
ಕಾಣ್ಸೋಲ್ಕಣ್ಣದ್ಕುರಡರ್ಗೆ
ಕತ್ಲಾ ಇಲ್ದಲ್ಬೆಳಕ್ಹುಡುಕ್ತಾರೆ
ಏನನ್ಬೇಕೀ ಬರಡರ್ಗೆ?

ಹುಡಕ್ಕೊಟ್ಟವ್ರೆ ಬ್ಯಾಂಗ್ಲೋರ್ನಲ್ಲಿ
ಪ್ಯೂರ್ ಕನ್ನಡ್ ಮಾತ್ನ
ತಡಮಾಡ್ದೇನೇ ಕೊಡ್ತಾರಂತೆ
ಪದವಿ ಇಂಗ್ಲೀಷ್ರತ್ನ

ನೆಂಟರು ಬಂದರು

(ರಾಯರು ಬಂದರು ಮಾನವ ಮನೆಗೆ ಕೆ.ಎಸ್.ನ. ಕ್ಷಮೆ ಕೋರಿ)

- ಬೇಲೂರು ರಾಮಮೂರ್ತಿ

ನೆಂಟರು ಬಂದರು ಜುಗ್ಗನ ಮನೆಗೆ
ರಾತ್ರಿಯಾಗಿತ್ತು
ಊಟವ ಮುಗಿಸಿದ ಪಾತ್ರೆಯ ನಡುವೆ
ತಪ್ಪಲೆ ಒಂದಿತ್ತು; ತಣ್ಣೀರಿನ
ತಪ್ಪಲೆ ಒಂದಿತ್ತು

ಜುಗ್ಗನ ಮನದಲಿ ನೆಂಟರ ಕಂಡು
ಕಳವಳ ತುಂಬಿತ್ತು
ಕಾರಣ ಹುಡುಕೀ ನೆಂಟರ ಸಾಗಿಸೋ
ಸಂಚನು ನಡೆಸಿತ್ತು - ಒಳಗಡೆ
ಗುಸುಗುಸು ನಡೆದಿತ್ತು

ಏನೂ ರುಚಿಸದ ಮಾತಿನ ಔತಣ
ನೆಂಟರ ಕಾದಿತ್ತು
ಹೊಟ್ಟೆಯ ಹಸಿವು ಗಗನಕೆ ಏರಲು
ಕೈಕಾಲ್ ಕುಸಿದಿತ್ತು - ನೆಂಟರ
ಶಕ್ತಿಯೇ ಉಡುಗಿತ್ತು

ಅಟ್ಟದ ಮೇಲಿನ ಡಬ್ಬದ ಪಕ್ಕದಿ
ತಿಂಡಿಯ ಗಂಟಿತ್ತು
ಗಂಟಿನ ಪಕ್ಕಕೆ ಗೋಡೆಯ ಅಂಚಿಗೆ
ಬಾಳೆಯ ಹಣ್ಣಿತ್ತು - ಕಳಿತಿಹ
ಬಾಳೆಯ ಹಣ್ಣಿತ್ತು

ಪುಟ್ಟನೆ ಲೋಟದಿ ಕಾಫಿಯ ತಂದಳು
ಜುಗ್ಗಿಣಿ ನಗುನಗುತಾ
ತಡೆಯದೆ ನಿದ್ದೆಯ ಮಾಡೇ ಬಿಟ್ಟನು
ನೆಮ್ಮದಿಯಲು ಜುಗ್ಗ - ಊಟದ
ಸದ್ದೇ ಇರಲಿಲ್ಲ

ಜುಗ್ಗನ ಪತ್ನಿಯ ಕರೆದಿಂತೆಂದರು
ಊಟಕೆ ಹಾಕಮ್ಮ
ಕಿರುದನಿಯಲಿ ಜುಗ್ಗಿಣಿ ಅಂದಳು
ಅಡುಗೆಯು ಉಳಿದಿಲ್ಲ - ನಕ್ಕಳು
ನೆಂಟರು ನಗಲಿಲ್ಲ

ದೂರದ ಊರಿಂ ಬಂದಿಹ ನೆಂಟರು
ಜುಗ್ಗನ ದರುಶನಕೆ
ಮುಚ್ಚಿದ ಕಣ್ಣೊಳು ನಿದ್ದೆಯೆ ಬಾರದು
ಹೊಟ್ಟೆಗೆ ಹಿಟ್ಟಿಲ್ಲ - ಹಿಟ್ಟಿನ
ವಾಸನೆ ಸುಳಿವಿಲ್ಲ

ಬೆಳಗಾಯಿತು ಸರಿ ಹೊರಡುವೆನೆಂದರು
ನೆಂಟರು ಕೋಪದಲಿ
ಬೇಗನೆ ಹೊರಡಿರಿ ಬಸ್ಸಿದೆ ಎಂದನು
ಜುಗ್ಗನು ಜಾಲಿಯಲಿ - ಹೊರಡಿ
ಎಂದನು ಆತುರದಿ
ಜುಗ್ಗಿಣಿ ನಿಂತಳು ಕೈಯನು ಮುಗಿಯುತ
ಬಾಗಿಲ ಅಂಚಿನಲಿ

ನೆಂಟರು ಬಂದರು ಜುಗ್ಗನ ಮನೆಗೆ
ರಾತ್ರಿಯಾಗಿತ್ತು
ಊಟವ ಮುಗಿಸಿದ ಪಾತ್ರೆಯ ನಡುವೆ
ತಪ್ಪಲೆ ಒಂದಿತ್ತು; ತಣ್ಣೀರಿನ
ತಪ್ಪಲೆ ಒಂದಿತ್ತು



ದೊಡ್ಡೋನಾಗಿ ಪ್ರಿಯಾಂಕಾ ಆಳ್ವಿಕೇಲಿ ಸುಖವಾಗಿರು ಮರಿ.

ಫೋನಿನ ಅವಾಂತರಗಳು

ಯು. ಎಸ್. ರಾವ್

ಫೋನುಗಳ ವಿಷಯ ಸಾಕಷ್ಟು ಬರೆಯಲ್ಪಟ್ಟಿದೆಯೆಂದು ತಿಳಿದಿದ್ದೆ. ಆದರೆ, ನಮ್ಮ ಫೋನು ಮಾಡುವ ಅವಾಂತರ ನೋಡುವಾಗ, ಪ್ರತಿಯೊಂದು ಫೋನಿಗೆ ಅದರದೇ ಆದ 'ವ್ಯಕ್ತಿತ್ವ' ವಿದೆಯೆಂದು ಕಾಣುತ್ತದೆ.

ಮೊದಲೆಲ್ಲ, ತೂತುಗಳಲ್ಲಿ ಬೆರಳು ತೂರಿಸಿ, ಮುಕ್ಕಾಲು ವೃತ್ತ, ಅರ್ಧವೃತ್ತ ತಿರುಗಿಸುತ್ತಾ ಡಯಲ್ ಮಾಡುವ ಫೋನುಗಳಿದ್ದುವು. ಹಾಗೆ ಡಯಲ್ ಮಾಡುವಾಗ ಅವು ಹೊರಡಿಸುವ ಗುಟುರುಧ್ವನಿ, ನಾವು ಮಾಡುತ್ತಿರುವ ಮಹಾಕಾರ್ಯವೆಂದು ಭಾವನೆ ಬರುತ್ತಿದ್ದಿತು - ಅಲ್ಲದೇ ಮತ್ತೇನು? ನಾಲ್ಕೈದು ಸಲ ಬೆರಳು ತಿರುಗಿಸಿ, ಡೆಲ್ಲಿ, ಡೆಹರಾಡೂನ್, ಲಂಡನ್‌ನಲ್ಲಿರುವವರೊಡನೆ ಮಾತನಾಡುವುದು ಈಗ ಸಾಮಾನ್ಯವಾಗಿದ್ದರೂ, ಮಹಾಕಾರ್ಯವೇ! ಈಗ ಹೇಗಿದ್ದರೂ ಎಲ್ಲಿಂದ ಬೇಕಾದರೂ, ಎಲ್ಲಿಗೆ ಬೇಕಾದರೂ ಮಾತನಾಡಬಹುದಂತೆ!

ಆ ಫೋನುಗಳ ತೂಕ ಕೂಡಾ ಸಾಕಷ್ಟಿದ್ದು, ತಪ್ಪಿ ಕಾಲಮೇಲೆ ಬಿದ್ದರೆ ಮೂಳೆ ಮುರಿಯಬಹುದಾಗಿತ್ತು. ಆ ಫೋನುಗಳು ಗಂಡು ಫೋನುಗಳು. ಅವುಗಳ ಬದಲು ಈಗ ಬಂದಿರುವ ಕೋಮಲಾಂಗಿ ಫೋನುಗಳನ್ನು ನೋಡಿ. ಗುಂಡಿಗಳನ್ನು ಒತ್ತಿ ಡಯಲ್ ಮಾಡಿದರೆ, ಬೆರಳು ತಿರುಗಿಸಿ ಗುಟುರು ಹಾಕಿಸುವ ಆತ್ಮತೃಪ್ತಿ ಎಲ್ಲಿಂದ ಬರುತ್ತದೆ? ಬೇಡವೆಂದು ಬಡಕೊಂಡರೂ, ಇದನ್ನು ಹೊಸದಾಗಿ ಕೊಟ್ಟರು. ಶುರುವಾಯಿತು ಅದಕ್ಕೆ ಬಾಲಗ್ರಹ - ಮೂರು ದಿನಕ್ಕೊಮ್ಮೆ ಏನೋ ವಿಚಿತ್ರಧ್ವನಿ ಹೊರಡಿಸುತ್ತ ಸುಮ್ಮನೆ ಬಿದ್ದಿರುತ್ತಿತ್ತು. ಫೋನಿನವರನ್ನು ಕರೆದು ತೋರಿಸಿದರೆ, ಏನು ಮಾಡಿದರು ಗೊತ್ತೇ? ಗ್ಯಾಸ್ ಒಲೆ ಒತ್ತಿಸಿ, ಹಪ್ಪಳ ಸುಡುವಂತೆ, ಫೋನನ್ನು ಅದರ ಮೇಲೆ ಹಿಡಿದರು! ಮೂರು, ನಾಲ್ಕು ನಿಮಿಷ ಮಿತವಾಗಿ ಕಾಯಿಸುತ್ತಲೇ ಸರಿಹೋಯಿತು! ಅದಕ್ಕೆ ಶೀತಭಾದೆ ಅಧಿಕವಂತೆ. ಆದರೆ, ಡಿಪಾರ್ಟ್‌ಮೆಂಟಿನವ ಹಾಗೆ ರಿಪೇರಿ ಮಾಡಿದನೆಂದು ನಾವು ಮಾಡಲಾದೀತೇ? ಈಗ ಅವನು ಹೇಳಿದಂತೆ ಉಣ್ಣೆಯ ಕುಲಾವಿ ಹೊಲಿಸಿ, ಯಾವಾಗಲೂ ಫೋನಿಗೆ ಹೊದಿಸುತ್ತೇನೆ - ಶೀತಭಾದೆ ಹೋಗಲಾಡಿಸಲು.

ಇನ್ನು ಆಗಾಗ ಬರುವ ರಾಂಗ್ ನಂಬರುದಾರರ ಅವಾಂತರ ಕೇಳಿ - ''ಹರೀಶ್ ಇದ್ದಾನೋ?'' (ನನ್ನ ಮಗನ ಹೆಸರು) - ''ಅವನು ಬೊಂಬಾಯಿಯಲ್ಲಿದ್ದಾನೆ.'' ''ಸುರೇಶ್ ಇದ್ದಾನೋ?'' (ನನ್ನ ಇನ್ನೊಬ್ಬ ಮಗನ ಹೆಸರು) - ''ಅವನು ಕೂಡ ಬೊಂಬಾಯಿಯಲ್ಲಿದ್ದಾನೆ'' ''ಜಯಂತಿ ಇದ್ದಾಳೋ?'' (ನನ್ನ ಹೆಂಡತಿಯ ಹೆಸರು) ''ಮಾರ್ಕೆಟಿಗೆ ಹೋಗಿದ್ದಾಳೆ.'' ಇಷ್ಟಾಗುವಾಗ ಆಸಾಮಿಗೆ ಏನೋ ಸಂಶಯ ಬಂದಿರಬೇಕು. ''ನೀವು ಗಣಪತ್‌ರಾಯರಲ್ಲವೋ?'' ''ಅಲ್ಲ ನಾನು ಶ್ರೀನಿವಾಸರಾಯ'' ಎಂದು ಫೋನ್ ಕುಕ್ಕಿದೆ. ಆದರೆ, ನನ್ನ ಹೆಂಡತಿಯ ಮತ್ತು ಇಬ್ಬರು

ಮಕ್ಕಳ ಹೆಸರುಗಳನ್ನೇ ಹೊಂದಿಸಿದ ಗಣಪತ್‌ರಾಯರನ್ನು ನೋಡಬೇಕೆಂದು ನನ್ನ ಆಸೆ.

ಫೋನ್ ರಿಪೇರಿಗೆ ಬರುವ ಸೈಂಧವರೊಡನೆ ವ್ಯವಹರಿಸುವುದು ಸುಲಭವಲ್ಲ. ಇಲೆಕ್ಟ್ರಿಕ್ ಬೋರ್ಡ್, ನೀರು ಸರಬರಾಯಿ ಡಿಪಾರ್ಟ್‌ಮೆಂಟಿನಿಂದ ಬರುವವರಿಗಿಂತ ಇವರು ಮೇಲಿನವರು. ಲೋಕಾಭಿರಾಮವಾಗಿ ಮಾತನಾಡಿ, ಚಾ ಕುಡಿಸಿ, ಒಂದು ಮಡಿಸಿದ 'ಕಾಗದದ' ತುಂಡನ್ನು ಅವರ ಜೇಬಿಗೆ ತುರುಕುವುದು ನನ್ನ ರೂಢಿ. ಮೊನ್ನೆ ಬಂದ ಆಸಾಮಿ ಹಾಸನದವನಂತೆ. ಇನ್ನೂ ಜಾಗ್ರತೆಯಾಗಿರಬೇಕೆಂದು, ಚಾ ಕೊಡುವಾಗ ಬಿಸ್ಕತ್ತು ಕೂಡ ಕೊಡಿಸಿದೆ.

ನನ್ನ ಈಗಿನ ಸಮಸ್ಯೆ ಇನ್ನೂ ವಿಲಕ್ಷಣವಾಗಿದೆ. ರಾತ್ರೆ ನಿದ್ರೆಯಲ್ಲಿರುವಾಗ ಬಡಕೊಳ್ಳಲು ಆರಂಭವಾದ ಫೋನು, ನಾನು ಎದ್ದು ಕುಳಿತುಕೊಳ್ಳುವಾಗ ಸ್ತಬ್ಧವಾಗುತ್ತದೆ. ಎರಡು ಮೂರು ಬಾರಿ ಹೀಗಾದ ಮೇಲೆ ನನಗೆ ನನ್ನ ಕಿವಿಗಳ ಮೇಲೆಯೇ ಸಂಶಯ ಬಂದಿದೆ. ಒಂದು ರಾತ್ರಿ ಹೀಗೆ ಫೋನು ಬಡಕೊಳ್ಳುವುದು ಕೇಳಿ ಎಚ್ಚರವಾಗಿ, ಇವಳನ್ನು ಎಬ್ಬಿಸಿ ಕೇಳಿದೆ- ''ಫೋನು ಒಂದೇ ಸವನೆ ಗಾಯನ ಮಾಡುತ್ತಿದೆ. ಯಾರೆಂದು ನೋಡು.'' ಇವಳು ಆಲಿಸಿ ನೋಡಿ ಹೇಳಿದಳು - ''ಫೋನೂ ಬಂದಿಲ್ಲ, ಏನೂ ಇಲ್ಲ. ಸುಮ್ಮನೆ ಮಲಗಿಕೊಳ್ಳಿ'' ಆದರೆ ನನಗೆ ಆಗಾಗ ಫೋನು ಕೇಳಿಸುತ್ತಾ ಇರುತ್ತದೆ. ಇದಕ್ಕೆ ಏನಾದರೂ ಪರಿಹಾರವಿದ್ದರೆ ಹೇಳಿ.

ಗಂಡಂದಿರು ಆಫೀಸಿಗೆ ಹೋದಾಗ, ಮಡದಿಯರು ಸುಲಭವಾಗಿ S.T.D. ಮಾಡಿ ತಮ್ಮ ತವರಿಗೆ, ತಂಗಿಯಂದಿರಿಗೆ, ಸ್ನೇಹಿತೆಯರಿಗೆ ಗಂಟೆಗಟ್ಟಲೆ ಮಾತನಾಡಿಕೊಳ್ಳುವುದು ಈಗಿನ ಸೌಕರ್ಯ. ಫೋನ್ ಬಿಲ್ಲು ಸಾವಿರಗಟ್ಟಲೆ ಬರುವಾಗ ಗಂಡಂದಿರು ಲಬೋ ಲಬೋ ಬಡಿದುಕೊಳ್ಳುವಾಗ, ಏನು ತಿಳಿಯದಂತಿರುತ್ತಾರೆ! ಕೊನೆಗೆ ಈಗ S.T.D. ಮಾಡಿದ ವಿವರಗಳು ಬರಲು ಆರಂಭವಾದ ಮೇಲೆ, ಮನೆಯಲ್ಲಿ ಕುರುಕ್ಷೇತ್ರ ನಡೆದು, ಈಗ ಈ ಪರಿಸ್ಥಿತಿ ಸುಧಾರಿಸಿದೆ. ಇದು ಫೋನಿನ ತಪ್ಪಲ್ಲ. ಹಿಂದೆ ಒಂದು ಟ್ರಂಕ್ ಕಾಲ್ ಮಾಡಲು ಒಂದು ದಿನ ಬೇಕಾಗಿತ್ತು. ಈಗ ಒಂದು ನಿಮಿಷ ಸಾಕು. ಯಾರೋ ಹೇಳಿದರೆಂದು ಸಿಕ್ರೆಟ್ ಕೋಡ್ ಮಾಡಿ, ಫೋನ್ ಬಂದ್ ಮಾಡಿದೆ. ನನ್ನ ಸಿಕ್ರೆಟ್ ಕೋಡ್, ನನಗೇ ಮರೆತು ಪಟ್ಟ ಫಜೀತಿಯಿಂದ ಈಗ ಇದನ್ನು ಬಿಟ್ಟಿದ್ದೇನೆ.

ಯಾಕೆ ಬೇಕಾ?

ಬೇರೆ ಏನೆಲ್ಲ ಯಾಕೆ
ಬೇಕಾ ಸುಖಾ-
ಸುಮ್ಮನೆ?

ನನಗಂತೂ ಎಲ್ಲ ಸುಖ
ಸಖಾ-
ರಾಮನೆ

ಎನ್. ಪ್ರಕಾಶ್

Reg. No.: BGW -180



Printed by V.R. NATH for the Publisher M. SHIVAKUMAR, Published and owned by M. SHIVA KUMAR. 36. 6th Main Road, Malleswaram, Bangalore-560 003. Printed at IMPRESSIONS. 404. Sampige Road, Malleswaram, Bangalore-560 003. Editor : M. SHIVAKUMAR.